ಅರ್‌ಬಿಐ/2007–2008/64
ಡಿಜಿಬಿಎ.ಜಿಎಡಿ.ಸಂ.ಹೆಚ್.09/31.05.001/2007–08 ಜುಲೈ 2, 2007

ಎಲ್ಲ ಏಜೆನ್ಸಿ ಬ್ಯಾಂಕುಗಳಿಗೆ

ಮಾನ್ಯರೇ,

ಪ್ರಧಾನ ಸುತ್ತೋಲೆ – ಏಜೆನ್ಸಿ ಬ್ಯಾಂಕುಗಳಿಂದ ನಿವೃತ್ತಿ ವೇತನ ವಿತರಣೆ

ಏಜೆನ್ಸಿ ಬ್ಯಾಂಕುಗಳಿಂದ ಸರ್ಕಾರಿ ನಿವೃತ್ತಿ ವೇತನ ಪಾವತಿಯ ಸಂಬಂಧ ಭಾರತೀಯ ರಿಸರ್ವ್ ಬ್ಯಾಂಕ್, ಹಲವಾರು ಸೂಚನೆಗಳನ್ನು ನೀಡುತ್ತಿದೆ. ಈ ಸೂಚನೆಗಳನ್ನು ದಿನಾಂಕ ಜುಲೈ 19, 2006ರ ಪ್ರಧಾನ ಸುತ್ತೋಲೆ ಸಂಖ್ಯೆ ಆರ್‌ಬಿಐ/2006/78(ಡಿಜಿಬಿಎ.ಜಿಎಡಿ.ಸಂ.1059/31.05.001/2006–07) ಯಲ್ಲಿ ತಿಳಿಸಲಾಗಿದೆ. ದಿನಾಂಕ ಜೂನ್ 30, 2007 ರವರೆಗೆ ಈ ವಿಷಯದ ಮೇಲೆ ನೀಡಿದ ಮುಖ್ಯ ಸೂಚನೆಗಳನ್ನು ಅಳವಡಿಸಿ, ಪ್ರಧಾನ ಸುತ್ತೋಲೆಯನ್ನು ಪರಿಷ್ಕರಿಸಿ, ಇಲ್ಲಿ ಈಗ ಲಗತ್ತಿಸಿದೆ. ಈ ಸುತ್ತೋಲೆ ನಮ್ಮ ವೆಬ್‌ತಾಣ www.rbi.org.in ನಲ್ಲೂ ಲಭ್ಯವಿದೆ.

2. ದಯವಿಟ್ಟು ಸ್ವೀಕೃತಿಯನ್ನು ನೀಡಿ.

ತಮ್ಮ ವಿಶ್ವಾಸಿ

(ಸಹಿ)
(ಎಮ್.ಟಿ. ವರ್ಗೀಸ್)
ಮಹಾ ವ್ಯವಸ್ಥಾಪಕರು

ಪ್ರಧಾನ ಸುತ್ತೋಲೆ – ಏಜೆನ್ಸಿ ಬ್ಯಾಂಕುಗಳಿಂದ ನಿವೃತ್ತಿ ವೇತನ ವಿತರಣೆ

ಸರ್ಕಾರಿ ನಿವೃತ್ತ ವೇತನದಾರರಿಗೆ ನಿವೃತ್ತಿ ವೇತನ ಪಾವತಿ ಮಾಡುವ ವಿವಿಧ ಯೋಜನೆಯಡಿಯಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳ ಮೂಲಕ ನಿವೃತ್ತಿ ವೇತನ ಪಾವತಿ

1. ಪ್ರಸ್ತಾವನೆ

ನಿವೃತ್ತ ಸರ್ಕಾರಿ ನೌಕರರಿಗೆ, ನಿವೃತ್ತಿ ವೇತನದ ಪಾವತಿ, ಭಾರತ ಸರ್ಕಾರದ ಹಣಕಾಸು ಸಚಿವಾಲಯ ಇಲಾಖೆಯ ಕಂಟ್ರೋಲರ್ ಜನರಲ್ ಆಫ್ ಅಕೌಂಟ್ಸ್ ಅಥವಾ ರಾಜ್ಯ ಸರ್ಕಾರಗಳ ಅನುಮೋದನೆ ಪಡೆದು ಸಂಬಂಧಪಟ್ಟ ಇಲಾಖೆಯ ಮಂತ್ರಾಲಯ ಅಥವಾ ಇಲಾಖೆಗಳು ರೂಪಿಸಿದ ಸಂಗತ ಯೋಜನೆಗಳಿಂದ ನಿರ್ವಹಿಸಲ್ಪಡುತ್ತದೆ. ಮೂಲ ನಿವೃತ್ತಿ ವೇತನದ ಪಾವತಿ, ಹೆಚ್ಚಳಗೊಂಡ ತುಟ್ಟಿ ಭತ್ಯೆ ಪರಿಹಾರ ಹಾಗೂ ಸರ್ಕಾರಗಳು ಅಗಾಗ ಘೋಷಿಸುವ ಇತರ ಸೌಲಭ್ಯಗಳನ್ನು ಒಳಗೊಂಡಿರುತ್ತದೆ. ಈ ಬಗ್ಗೆ ನೀಡಲಾದ ವಿವಿಧ ಸುತ್ತೋಲೆಗಳ ಸಾರಾಂಶವನ್ನು ತಿಳುವಳಿಕೆಗಾಗಿ ಸಂಗ್ರಹಿಸಿ ನೀಡಲಾಗಿದೆ.

2. ರಾಜ್ಯ ಸರ್ಕಾರಗಳ ವೆಬ್‌ತಾಣದಲ್ಲಿ ರಾಜ್ಯ ಸರ್ಕಾರದ ನಿವೃತ್ತಿ ವೇತನದಾರರಿಗೆ ತುಟ್ಟಿಭತ್ಯೆ ಪರಿಹಾರ (ಡಿಆರ್) ಇತ್ಯಾದಿಗಳ ಮೇಲೆ ಹೊರಡಿಸಲಾದ ಸರ್ಕಾರಿ ಆಜ್ಞೆಗಳನ್ನು ಪ್ರಕಟಿಸುವುದು.

(ಉಲ್ಲೇಖ: ಡಿಜಿಬಿಎ.ಜಿಎಡಿ.ಸಂ.ಹೆಚ್–416/45.01.003/2002–03 ದಿನಾಂಕ ಮಾರ್ಚ್ 21, 2003 ಮತ್ತು ಡಿಜಿಬಿಎ.ಜಿಎಡಿ.ಸಂ.770/45.01.003/2003–04 ದಿನಾಂಕ ಫೆಬ್ರುವರಿ 25, 2004)

ತುಟ್ಟಿಭತ್ಯೆ ಪರಿಹಾರ ಆಜ್ಞೆಗಳನ್ನು ನೀಡುವಲ್ಲಿ ಮತ್ತು ಫಲಾನುಭವಿಗೆ ತುಟ್ಟಿಭತ್ಯೆ ಪರಿಹಾರ ಪಾವತಿಯ ನಡುವಿನ ಸಮಯ ವಿಳಂಬವನ್ನು ನಿವಾರಿಸಲು ಮತ್ತು ಹಿರಿಯ ನಾಗರಿಕರಿಗೆ ತ್ವರಿತಗತಿ ಸೇವೆ ಒದಗಿಸಲು, ಮುಖ್ಯ ಕಚೇರಿಗಳಿಗೆ ಮತ್ತು/ಅಥವಾ ರಾಜ್ಯಗಳಲ್ಲಿರುವ ಅಧಿಕೃತ ಬ್ಯಾಂಕುಗಳ ಪ್ರಾದೇಶಿಕ ಕಚೇರಿಗಳಿಗೆ ಸರಕಾರ ಸರಬರಾಜು ಮಾಡುವ ಆಜ್ಞೆಗ್ಗಳ ಪ್ರತಿಗಳ ಅಧಾರದ ಮೇಲೆ ನಿವೃತ್ತಿ ವೇತನ ಪಾವತಿಮಾಡಲು ಏಜೆನ್ಸಿ ಬ್ಯಾಂಕುಗಳು ಕ್ರಮ ಕೈಗೊಳ್ಳತಕ್ಕದ್ದು ಎಂಬುದಾಗಿ ನಿರ್ಧರಿಸಲಾಯಿತು.

ಮುಂದುವರಿದು, ರಾಜ್ಯ ಸರ್ಕಾರಗಳ ಸುರಕ್ಷಿತ ವೆಬ್‌ತಾಣದಲ್ಲಿ ಸುತ್ತೋಲೆಗಳನ್ನು ಪ್ರಕಟಿಸಬೇಕೆಂದು ನಿರ್ಧರಿಸಲಾಯಿತು.

ಭಾರತೀಯ ರಿಸರ್ವ್ ಬ್ಯಾಂಕಿಗೆ ತನ್ನ ವೆಬ್‌ತಾಣದಲ್ಲಿ ಪ್ರಕಟಿಸಲು ಸಹಾಯವಾಗುವಂತೆ ಎಲ್ಲ ರಾಜ್ಯ ಸರ್ಕಾರಗಳು ತುಟ್ಟಿಭತ್ಯೆ ಪರಿಹಾರ ಸಂಬಂಧದಲ್ಲಿ ಹೊರಡಿಸಿರುವ ಸರ್ಕಾರಿ ಆಜ್ಞೆಗಳನ್ನು ವಿದ್ಯುನ್ಮಾನ ರೂಪದಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿಗೆ ಕಳುಹಿಸುವ ಆಯ್ಕೆಯನ್ನು ನೀಡಿದ್ದು, ಅಲ್ಲದೇ ಮುದ್ರಿತ ರೂಪದಲ್ಲೂ ರಿಸರ್ವ್ ಬ್ಯಾಂಕಿಗೆ ಕಳುಹಿಸಬೇಕಾಗುವುದು.

3. ಕೇಂದ್ರ ಸರ್ಕಾರದ ನಿವೃತ್ತಿ ವೇತನದಾರರಿಗೆ ಸಾರ್ವಜನಿಕ ವಲಯ ಬ್ಯಾಂಕುಗಳ ಮೂಲಕ ನಿವೃತ್ತಿ ವೇತನ ಪಾವತಿ – ನಿವೃತ್ತಿ ವೇತನದಾರರಿಗೆ ತುಟ್ಟಿಭತ್ಯೆ (ಡಿಆರ್) ಪರಿಹಾರದ ಪಾವತಿಯ ವಿಳಂಬವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳು – ಭಾರತೀಯ ರಿಸರ್ವ್ ಬ್ಯಾಂಕ್ ಮೂಲಕ ಡಿಆರ್ ಇತ್ಯಾದಿಗಳ ಬಗೆಗಿನ ಸರ್ಕಾರಿ ಆಜ್ಞೆಗಳನ್ನು ಕಳುಹಿಸುವ ಪದ್ಧತಿಯ ನಿಲ್ಲಿಸುವಿಕೆ

(ಉಲ್ಲೇಖ: ಡಿಜಿಬಿಎ.ಜಿಡಿ.ಸಂ.ಹೆಚ್–506/45.01.001/2002–03 ದಿನಾಂಕ ಏಪ್ರಿಲ್ 12, 2003)

ತುಟ್ಟಿಭತ್ಯೆ ಪರಿಹಾರ ಇತ್ಯಾದಿ ಆಜ್ಞೆಗಳ ನೀಡಿಕೆ ಮತ್ತು ಫಲಾನುಭವಿಗಳಿಗೆ ವಾಸ್ತವ ಪಾವತಿಯ ನಡುವಿನ ಸಮಯ ವಿಳಂಬವನ್ನು ನಿವಾರಿಸುವ ಸಲುವಾಗಿ ಮತ್ತು ಹಿರಿಯ ನಾಗರಿಕರಿಗೆ ತ್ವರಿತ ಸೇವೆಯನ್ನು ನೀಡುವುದಕ್ಕಾಗಿ, ಭಾರತ ಸರಕಾರದ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ನಿವೃತ್ತಿ ವೇತನಗಳ ಸಚಿವಾಲಯ, ನಿವೃತ್ತಿ ವೇತನ ಮತ್ತು ನಿವೃತ್ತಿ ವೇತನದಾರರ ಕಲ್ಯಾಣ ಇಲಾಖೆಯು ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1) ಹಣಕಾಸು ಸಚಿವ ಇಲಾಖೆಯಿಂದ ಪರಿಷ್ಕರಿಸಿದ ದರದಲ್ಲಿ ತುಟ್ಟಿಭತ್ಯೆ ಪರಿಹಾರದ ಮಂಜೂರಾತಿಯನ್ನು ಪಡೆದ ಕೂಡಲೇ, ಪರಿಷ್ಕೃತ ದರದಲ್ಲಿ ತುಟ್ಟಿಭತ್ಯೆ ಪರಿಹಾರವನ್ನು ನಿವೃತ್ತಿ ವೇತನದಾರರಿಗೆ ಪಾವತಿಸುವ ಆಜ್ಞೆ ನೀಡಬೇಕು ಮತ್ತು ಅಂತಹ ಆಜ್ಞೆಗಳ ಪ್ರತಿಗಳನ್ನು ಈ–ಮೇಲ್ ಮೂಲಕ ಎಲ್ಲ ಏಜೆನ್ಸಿ ಬ್ಯಾಂಕುಗಳ ಮುಖ್ಯಸ್ಥರಿಗೆ ತಕ್ಷಣ ಕಳುಹಿಸಬೇಕು. ಅಲ್ಲದೇ, ತುಟ್ಟಿಭತ್ಯೆ ಪರಿಹಾರದ ತ್ವರಿತ ಪಾವತಿಯನ್ನು ಮಾಡಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸೂಚನೆಗಳನ್ನು ಫ್ಯಾಕ್ಸ್ ಮೂಲಕ ಕಳುಹಿಸಬೇಕು.

2) ಸಿಬ್ಬಂದಿವರ್ಗ, ಸಾರ್ವಜನಿಕ ಕುಂದುಕೊರತೆ ಮತ್ತು ನಿವೃತ್ತಿ ವೇತನಗಳ ಸಚಿವ ಖಾತೆಯ ವೆಬ್‌ತಾಣದಲ್ಲೂ ಆಜ್ಞೆಗಳನ್ನು ಪ್ರಕಟಿಸಬೇಕು. (http://www.rbi.org.in)

3) ಆಜ್ಞೆಗಳ ಪ್ರತಿಗಳನ್ನು ಎಲ್ಲ ಏಜೆನ್ಸಿ ಬ್ಯಾಂಕುಗಳ ಮುಖ್ಯಸ್ಥರಿಗೆ ಅಂಚೆ ಮೂಲಕವೂ ಕಳುಹಿಸುವುದಲ್ಲದೇ, ಪ್ರಮುಖ ವೃತ್ತಪತ್ರಿಕೆಗಳಲ್ಲಿಯೂ ಇಂಡಿಯನ್ ಬ್ಯಾಂಕ್ಸ್ ಅಸೋಶಿಯೇಷನ್ ಪ್ರಕಟಿಸುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕ್, ತುಟ್ಟಿಭತ್ಯೆ ಪರಿಹಾರ ಕುರಿತ ಸರ್ಕಾರಿ ಆಜ್ಞೆಗಳನ್ನು ಏಜೆನ್ಸಿ ಬ್ಯಾಂಕುಗಳಿಗೆ ಕಳುಹಿಸುವ ಕಾರ್ಯವನ್ನು ಇನ್ನು ಮುಂದೆ ಮಾಡುವುದಿಲ್ಲ.

4. ಸಾರ್ವಜನಿಕ ವಲಯ ಬ್ಯಾಂಕುಗಳ ಮೂಲಕ ನಿವೃತ್ತಿ ವೇತನ ವಿತರಣೆ – ತುಟ್ಟಿಭತ್ಯೆ ಪರಿಹಾರದ ಪಾವತಿ (ಡಿಆರ್)

(ಆರ್‌ಬಿಐ/2006/296) (ಡಿಜಿಬಿಎ.ಜಿಎಡಿ.ಸಂ.ಹೆಚ್.11303/45.01.003/2005–06 ದಿನಾಂಕ ಫೆಬ್ರವರಿ 06, 2006)

ಸರ್ಕಾರ ಘೋಷಿಸಿರುವ ಸೌಲಭ್ಯವನ್ನು ನಿವೃತ್ತಿ ವೇತನದಾರರು ಆ ನಂತರ ಬರುವ ತಿಂಗಳಿನ ನಿವೃತ್ತಿ ವೇತನ ಪಾವತಿಯಲ್ಲೇ ಪಡೆಯಲು ಸಾಧ್ಯವಾಗುವಂತೆ ಸರ್ಕಾರದ ಆಜ್ಞೆಗಳನ್ನು ತಕ್ಷಣ ಪಡೆಯಲು ಮತ್ತು ಸೂಕ್ತ ಕ್ರಮ ಕೈಗೊಳ್ಳಲು ಅನುವಾಗುವಂತೆ ನಿವೃತ್ತಿ ವೇತನ ಪಾವತಿ ಮಾಡುವ ಶಾಖೆಗಳಿಗೆ ಅವುಗಳನ್ನು ಬಿಡುಗಡೆಗೊಳಿಸಲು ನಿವೃತ್ತಿ ವೇತನ ಪಾವತಿಮಾಡುವ ಬ್ಯಾಂಕುಗಳು ಒಂದು ವ್ಯವಸ್ಥೆಯನ್ನು ಹೊಂದಿರಬೇಕೆಂದು ಅವುಗಳಿಗೆ ಸೂಚಿಸಲಾಗಿದೆ. ಏಜೆನ್ಸಿ ಬ್ಯಾಂಕುಗಳ ನಿಯಂತ್ರಣ ಕಚೇರಿಗಳು/ಪ್ರಧಾನ ಕಚೇರಿಗಳು, ಅರ್ಹ ನಿವೃತ್ತಿ ವೇತನದಾರರಿಗೆ ಸೂಕ್ತ ಸಮಯದಲ್ಲಿ ಮತ್ತು ಸರಿಯಾದ ರೀತಿಯಲ್ಲಿ ಆಗುವಂತೆ ಸರ್ಕಾರಿ ನಿವೃತ್ತಿ ವೇತನ ವಿತರಣೆಯನ್ನು ಪರಾಮರ್ಷಿಸತಕ್ಕದ್ದು ಮತ್ತು ಮೇಲ್ವಿಚಾರಿಸತಕ್ಕದ್ದು. ಮುಂದುವರಿದು, ಕೇಂದ್ರ ನಾಗರಿಕ ಮತ್ತು ರೈಲ್ವೇ ನಿವೃತ್ತಿ ವೇತನದಾರರ ಪ್ರಕರಣಗಳಲ್ಲಿ, ನಿವೃತ್ತಿ ವೇತನ ನೀಡುವ ಬ್ಯಾಂಕುಗಳು ಪಾಸ್ ಪುಸ್ತಕದ ಮುಖಪುಟದಲ್ಲಿ ನಾಮನಿರ್ದೇಶನ ನಮೂನೆ 'ಎ' ಮತ್ತು 'ಬಿ' ಪ್ರಕಾರ ನಾಮನಿರ್ದೇಶಿತರ ಹೆಸರುಗಳನ್ನು ದೃಢಪಡಿಸಬೇಕು ಹಾಗೂ ಸಾರ್ವಜನಿಕ ವಲಯ ಬ್ಯಾಂಕುಗಳು ನಿವೃತ್ತಿದಾರರಿಗೆ ನಿವೃತ್ತಿ ವೇತನ ವಿತರಣೆಯ ಯೋಜನೆಯಲ್ಲಿ ಸೂಚಿತವಾಗಿರುವ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿರುವುದನ್ನು ಶಾಖೆಗಳು ಖಚಿತ ಪಡಿಸಿಕೊಂಡಿರಬೇಕು. ನಿವೃತ್ತಿ ವೇತನ ಪಾವತಿಯ ಯೋಜನೆಗಳ/ನಿಯಮಗಳ ಬಗ್ಗೆ ತಮ್ಮ ಸಿಬ್ಬಂದಿವರ್ಗವು ಉತ್ತಮ ಅರಿವನ್ನು ಹೊಂದಿರುವಂತಾಗಲು ತಾವು

ಏರ್ಪಡಿಸುವ ತರಬೇತಿ ಕೇಂದ್ರಗಳಲ್ಲಿನ ತರಬೇತಿ ಕಾರ್ಯಕ್ರಮಗಳಲ್ಲಿ ಈ ಅಂಶವನ್ನು ಒಂದು ಸಮಗ್ರ ಭಾಗವನ್ನಾಗಿ ಬ್ಯಾಂಕುಗಳು ಸೇರಿಸಬಹುದು.

5. ನಮೂನೆ 'ಎ' ಮತ್ತು 'ಬಿ' ಯಲ್ಲಿ ನಾಮನಿರ್ದೇಶನವನ್ನು ಅಂಗೀಕರಿಸುವುದು – ಕೇಂದ್ರ ನಾಗರಿಕ ನಿವೃತ್ತಿ ವೇತನ

(ಉಲ್ಲೇಖ : ಡಿಜಿಬಿಎ.ಜಿಎಡಿ.ಸಂ.ಹೆಚ್ 94/45.05.031/2004–05 ದಿನಾಂಕ ಆಗಸ್ಟ್ 24, 2004)

ನಿವೃತ್ತಿ ವೇತನದಾರರು ಮತ್ತು ಅವರ ವಾರಸುದಾರರ ಅನಾನುಕೂಲತೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ, ತಮ್ಮ ವಾರಸುದಾರರಿಗೆ ನಿವೃತ್ತಿ ವೇತನದ ಬಾಕಿಯ ಪಾವತಿಯನ್ನು ನೀಡಲು, ನಮೂನೆ 'ಎ' ಮತ್ತು 'ಬಿ' ಯಲ್ಲಿ, ಆಯಾಯ ಪ್ರಕರಣಗಳಿಗೆ ಅನ್ವಯಿಸುವಂತೆ, ನಿವೃತ್ತಿ ವೇತನದಾರರು ಸಲ್ಲಿಸಿರುವ ನಾಮನಿರ್ದೇಶನವನ್ನು, ನಿವೃತ್ತಿ ವೇತನ ನೀಡುವ ಬ್ಯಾಂಕಿನ ಶಾಖೆಗಳು ಅಂಗೀಕರಿಸಬೇಕೆಂದು ಸರ್ಕಾರವು ಸೂಚಿಸಿದೆ.

6. ನಿವೃತ್ತಿ ವೇತನದ ಬಾಕಿಯನ್ನು ಪಾವತಿಸಲು ರೈಲ್ವೆ ನಿವೃತ್ತಿ ವೇತನದಾರರಿಂದ ನಾಮನಿರ್ದೇಶನವನ್ನು (ನಮೂನೆ 'ಎ' ಮತ್ತು 'ಬಿ') ಅಂಗೀಕರಿಸುವುದು

(ಡಿಜಿಬಿಎ.ಜಿಎಡಿ.ಸಂ.ಹೆಚ್–3611/45.03.002/2005–06 ದಿನಾಂಕ ಅಕ್ಟೋಬರ್ 10, 2005)

ನಿವೃತ್ತಿ ವೇತನದಾರರ ಅನಾನುಕೂಲತೆಯನ್ನು ದೂರ ಮಾಡುವ ನಿಟ್ಟಿನಲ್ಲಿ, ರೈಲ್ವೆ ಸಚಿವಾಲಯವು (ರೈಲ್ವೆ ಮಂಡಳಿ) ರೈಲ್ವೆ ನಿವೃತ್ತಿ ವೇತನದಾರರಿಗೂ ಕೇಂದ್ರ ನಿವೃತ್ತಿ ವೇತನ ಅಕೌಂಟಿಂಗ್ ಕಚೇರಿಯು ನಿಗದಿಪಡಿಸಿರುವ ನಾಮನಿರ್ದೇಶನ ನಮೂನೆ ('ಎ' ಮತ್ತು 'ಬಿ') ಯನ್ನು ಅಳವಡಿಸಲು ನಿರ್ಧರಿಸಿತು. ತಮ್ಮ ವಾರಸುದಾರರಿಗೆ ನಿವೃತ್ತಿ ವೇತನದ ಬಾಕಿ ಪಾವತಿಗಾಗಿ, ರೈಲ್ವೆ ನಿವೃತ್ತಿ ವೇತನದಾರರು ಸಲ್ಲಿಸಿದ, ಅಯಾಯ ಪ್ರಕರಣಗಳಿಗೆ ಅನ್ವಯಿಸುವಂತೆ, ನಾಮ ನಿರ್ದೇಶನ ನಮೂನೆ 'ಎ' ಮತ್ತು 'ಬಿ' ಗಳನ್ನು ಸ್ವೀಕರಿಸಲು, ನಿವೃತ್ತಿ ವೇತನ ಪಾವತಿ ಮಾಡುವ ತಮ್ಮ ಎಲ್ಲಾ ಶಾಖೆಗಳಿಗೆ ಅಗತ್ಯ ಸೂಚನೆಗಳನ್ನು ನೀಡುವಂತೆ ಏಜೆನ್ಸಿ ಬ್ಯಾಂಕುಗಳಿಗೆ ತಿಳಿಸಲಾಯಿತು.

7. ಕೇಂದ್ರಿಯ ನಿಯೋಜನೆಯಲ್ಲಿರುವ ಭಾರತ ಸರಕಾರದಿಂದ, ನಿವೃತ್ತಿ ಹೊಂದುವ ಅಖಿಲ ಭಾರತ ಸೇವಾ ಅಧಿಕಾರಿಗಳಿಗೆ ನಿವೃತ್ತಿ ವೇತನ ಮತ್ತು ಇನ್ನಿತರ ನಿವೃತ್ತಿ ಸೌಲಭ್ಯವನ್ನು ನೀಡುವ ಕ್ರಮಗಳ ಜಾರಿಗೊಳಿಸುವಿಕೆ

(ಡಿಜಿಬಿಎ.ಜಿಎಡಿ.ಸಂ.612–644/45.01.001/2004–05 ದಿನಾಂಕ ಅಕ್ಟೋಬರ್ 7, 2004)

ಕೇಂದ್ರಿಯ ನಿಯೋಜನೆಯಲ್ಲಿರುವ ಭಾರತ ಸರಕಾರದಿಂದ ನಿವೃತ್ತಿ ಹೊಂದುವ ಅಖಿಲ ಭಾರತ ಸೇವಾ ಅಧಿಕಾರಿಗಳಿಗೆ ನಿವೃತ್ತಿ ವೇತನ ನೀಡುವ ಲೆಕ್ಕ ಹಾಕುವ ಕ್ರಮದ ಪಾಲನೆ ಬಗ್ಗೆ ಏಜೆನ್ಸಿ ಬ್ಯಾಂಕುಗಳು ಈ ಕೆಳಕಂಡ ಕ್ರಮಗಳನ್ನು ಅನುಸರಿಸತಕ್ಕದ್ದು.

i. ಕೇಂದ್ರ ಸರ್ಕಾರಿ ನಿವೃತ್ತಿ ವೇತನದಾರರ ಪಿ.ಪಿ.ಓ ಸಂಖ್ಯೆಯು ಕೇಂದ್ರ ನಾಗರಿಕ ಸೇವಾ ನಿವೃತ್ತಿ ವೇತನದಾರರಿಗೆ ಬಳಸುವ ಹನ್ನೆರಡು ಅಂಕಿಗಳ ಹೊರತಾಗಿ ನಿವೃತ್ತಿ ವೇತನದಾರನ ಸಂಬಂಧಿಸಿದ ಸೇವೆ ಹಾಗೂ ಅವನ ಸಂಬಂಧಿಸಿದ ರಾಜ್ಯ ಉದ್ಯೋಗಿ ವೃಂದದ ಬಗ್ಗೆ ಸೂಚಿಸುವ ಪೂರ್ವ ಪ್ರತ್ಯಯ

ಒಳಗೊಂಡಿರುತ್ತದೆ. ಪಂಜಾಬ್‌ನ ಆಡಳಿತ ಸೇವೆಯಲ್ಲಿರುವ ಅಧಿಕಾರಿಯ ಪಿ.ಪಿ.ಓ ಸಂಖ್ಯೆಯು ಉದಾಹರಣೆಗೆ ಈ ತರಹ ಇರುತ್ತದೆ: ಐಎಎಸ್/ಪಿಬಿ/438840400191.

ii. ಅಖಿಲ ಭಾರತೀಯ ಸೇವಾ ನಿವೃತ್ತ ವೇತನದಾರರು, ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳು ಮತ್ತು ನಾಲ್ಕು ಅಧಿಕೃತ ಖಾಸಗಿ ಬ್ಯಾಂಕುಗಳಾದ ಐಡಿಬಿಐ ಬ್ಯಾಂಕ್, ಯುಟಿಐ ಬ್ಯಾಂಕ್, ಐಸಿಐಸಿಐ ಬ್ಯಾಂಕ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ಗಳ ಮೂಲಕ ಮಾತ್ರ ನಿವೃತ್ತಿ ವೇತನ ಪಡೆಯುವ ಆಯ್ಕೆ ಇರುತ್ತದೆ.

iii. ಕೇಂದ್ರಿಯ ನಗರಿಕ ನಿವೃತ್ತಿ ವೇತನದಾರರಿಂದ ಪ್ರತ್ಯೇಕವಾಗಿ ಗುರುತಿಸುವಂತಾಗಲು ಸಿಪಿಎಒ ನೀಡುವ ವಿಶೇಷ ಮುದ್ರಾ ಪ್ರಾಧಿಕಾರವು (ಎಸ್.ಎಸ್.ಎ) ನೀಲಿ ಬಣ್ಣದಲ್ಲಿರುತ್ತದೆ. ಇದಲ್ಲದೆ ಪ್ರಾಧಿಕಾರವು, ಖರ್ಚು ಹಾಕಬಹುದಾದ ರಾಜ್ಯ ಸರ್ಕಾರದ ಬಗ್ಗೆಯೂ ತಿಳಿಸುತ್ತದೆ.

iv. ಎಸ್.ಎಸ್.ಎ ಯ ಒಂದು ಪ್ರತಿಯನ್ನು ಅಕೌಂಟೆಂಟ್ ಜನರಲ್ ಅವರಿಗೂ ಮಾಹಿತಿ ಹಾಗೂ ದಾಖಲೆಗಾಗಿ ಕಳುಹಿಸಲಾಗುತ್ತದೆ.

v. ನಿವೃತ್ತಿ ವೇತನದಾರನನ್ನು ಗುರುತಿಸುವುದಕ್ಕಾಗಿ ಅಗತ್ಯ ಕ್ರಮಗಳನ್ನು ಕೈಗೊಂಡನಂತರ ಬ್ಯಾಂಕಿನ ಪಾವತಿಸುವ ಶಾಖೆ, ಪಾವತಿಯನ್ನು ಬಿಡುಗಡೆ ಮಾಡುತ್ತದೆ ಮತ್ತು ತುಂಬಿಕೊಡುವುದಕ್ಕಾಗಿ ಸಂಬಂಧಿಸಿದ ಭಾರತೀಯ ರಿಸರ್ವ್ ಬ್ಯಾಂಕ್ / ಸ್ಟೇಟ್ ಬ್ಯಾಂಕ್ ಶಾಖೆಗೆ ಕಳುಹಿಸುವ ರಾಜ್ಯ ಸರ್ಕಾರಿ ನಿವೃತ್ತಿ ವೇತನದಾರರ ಸ್ಕ್ರೋಲ್‌ನಲ್ಲಿ ಅಖಿಲ ಭಾರತ ಸೇವಾ ನಿವೃತ್ತಿ ವೇತನದಾರನ ಹೆಸರನ್ನು ಸೇರಿಸಲಾಗುತ್ತದೆ. ಕೇಂದ್ರ ಸರ್ಕಾರದ ನಾಗರಿಕ ನಿವೃತ್ತಿ ವೇತನದಾರರ ಏಕ ಗವಾಕ್ಷಿ ನಿವೃತ್ತಿ ವೇತನ ತುಂಬಿ ಕೊಡುವ ಪದ್ಧತಿಯಲ್ಲಿ ಇದು ಸೇರಿರುವುದಿಲ್ಲವಾದುದರಿಂದ ಈ ತರಹದ ಸ್ಕ್ರೋಲ್‌ಗಳನ್ನು ಸಿಪಿಎಓಗೆ ಕಳುಹಿಸಬಾರದು.

vi. ತುಂಬಿ ಕೊಡುವ ಶಾಖೆಗಳು ರಾಜ್ಯ ಸರ್ಕಾರಿ ನಿವೃತ್ತಿ ವೇತನದಾರರಿಗಾಗಿರುವ ಕಾರ್ಯ ವಿಧಾನವನ್ನು ಅನುಸರಿಸುತ್ತವೆ ಮತ್ತು ಈ ಬಗ್ಗೆ ಸೂಚನೆಯನ್ನು ಭಾರತೀಯ ರಿಸರ್ವ್ ಬ್ಯಾಂಕ್, ಸಿಎಎಸ್ ನಾಗ್‌ಪೂರ್‌ಗೆ ಕಳುಹಿಸುತ್ತವೆ ಹಾಗೂ ಸ್ಕ್ರೋಲ್‌ಗಳನ್ನು ಸಂಬಂಧಿಸಿದ ಅಕೌಂಟೆಂಟ್ ಜನರಲ್ ಅವರಿಗೆ ಕಳುಹಿಸುತ್ತವೆ.

vii. ಭಾರತೀಯ ರಿಸರ್ವ್ ಬ್ಯಾಂಕ್, ಸಿಎಎಸ್ ನಾಗ್‌ಪೂರ್ ಪದ್ಧತಿಯಂತೆ ಸಂಬಂಧಿಸಿದ ರಾಜ್ಯ ಸರ್ಕಾರದ ಖಾತೆಗೆ ಖರ್ಚು ಹಾಕುತ್ತವೆ.

8. ಸಾರ್ವಜನಿಕ ವಲಯ ಬ್ಯಾಂಕುಗಳಿಂದ ರಕ್ಷಣಾ ಇಲಾಖೆಯ ನಿವೃತ್ತಿ ವೇತನದಾರರಿಗೆ ನಿವೃತ್ತಿ ವೇತನ ನೀಡುವ ಯೋಜನೆ – ನಿವೃತ್ತಿ ವೇತನ ವಿವರ ಸೂಚಿಯನ್ನು ಸಲ್ಲಿಸುವಿಕೆಯಲ್ಲಿ ವಿಳಂಬ ಮತ್ತು ಮೋಸ ಮತ್ತು ವಂಚನೆಯ ಪಾವತಿಯನ್ನು ತಡೆಗಟ್ಟಲು ಕ್ರಮಗಳು

(ಡಿಜಿಬಿಎ.ಜಿಎಡಿ.ಸಂ.867/45.02.001/2004–05 ದಿನಾಂಕ ಅಕ್ಟೋಬರ್ 18, 2004)

ನಿವೃತ್ತಿ ವೇತನ ಪಾವತಿಸುವ ಬ್ಯಾಂಕುಗಳು, ನಿವೃತ್ತಿ ವೇತನ ಪ್ರಾಧಿಕಾರಗಳಿಗೆ ನಿವೃತ್ತ ವೇತನ ಪಾವತಿಯ ವಿವರ ಸೂಚಿಯನ್ನು ಸಲ್ಲಿಸುವಾಗ ಎರಡರಿಂದ ಮೂರು ತಿಂಗಳವರೆಗೆ ವಿಳಂಬ ಮಾಡುತ್ತಿರುವುದನ್ನು ಗಮನಿಸಲಾಗಿದೆ.

ಕೆಲವೊಮ್ಮೆ ಈ ವಿವರ ಸೂಚಿಗಳು ಗುಂಪಾಗಿರುತ್ತವೆ. ಈ ಸಂಬಂಧದಲ್ಲಿ, 'ರಕ್ಷಣಾ ಇಲಾಖೆಯ ನಿವೃತ್ತಿ ವೇತನದಾರರಿಗೆ ನಿವೃತ್ತಿ ವೇತನ ಪಾವತಿಸುವ ಯೋಜನೆ' ಎಂಬ ಕಿರುಹೊತ್ತಿಗೆಯ ಪ್ಯಾರ 9(6), 10 ಮತ್ತು 11 ನ್ನು ಗಮನಿಸಬಹುದು. ಅಲ್ಲಿ ಪಾವತಿಮಾಡುವ ಶಾಖೆಗಳು, ಸಂಪರ್ಕ ಶಾಖೆಗಳು ಮತ್ತು ಭರ್ತಿಮಾಡುವ ಶಾಖೆಗಳು ನಿವೃತ್ತಿ ವೇತನ ಪಾವತಿ ವಿವರ ಸೂಚಿಯ ರವಾನೆ ವಿಧಾನವನ್ನು ಸ್ಪಷ್ಟವಾಗಿ ನಿಗದಿಪಡಿಸಲಾಗಿದೆ.

ಇದರ ಪೂರ್ಣ ಪ್ರಕ್ರಿಯೆಯನ್ನು ನಿರ್ದಿಷ್ಟಪಡಿಸಿದ ಕಾಲಾವಧಿಯಲ್ಲಿ ಪೂರ್ಣಗೊಳಿಸಬೇಕಿದ್ದು, ಅದರಂತೆ ಪಾವತಿ ವಿವರ ಸೂಚಿಯು ಅಂತಿಮವಾಗಿ ಮುಂದಿನ ತಿಂಗಳ 15ನೇ ದಿನಾಂಕದೊಳಗೆ ಅಲಹಾಬಾದಿನ ಪಿಸಿಡಿಎ (ನಿವೃತ್ತಿ ವೇತನ) ಕಚೇರಿಗೆ ತಲುಪುವಂತಿರಬೇಕು (ಮಾರ್ಚ್ ತಿಂಗಳ ವಿವರ ಸೂಚಿಯ ಹೊರತಾಗಿ, ಏಕೆಂದರೆ ಅದು ಅಂತಿಮವಾಗಿ ಪ್ರತಿ ವರ್ಷದ ಏಪ್ರಿಲ್ ತಿಂಗಳ ಮೂರನೇ ವಾರದ ಅಂತ್ಯದಲ್ಲಿ ತಪ್ಪದೆ ತಲುಪಬೇಕು)

ಪಿಸಿಡಿಎ (ನಿವೃತ್ತಿ ವೇತನ) ಕಚೇರಿಯು, ಕೆಲವೊಂದು ಪ್ರಕರಣಗಳಲ್ಲಿ ಗ್ರಾಚ್ಯುಯಿಟಿ ಮತ್ತು ಕಮ್ಯುಟೇಶನ್ ಮೊತ್ತವನ್ನು, ನಿರ್ದಿಷ್ಟಪದಿಸಿದ ತಪಾಸಣೆ ಮಾಡದೇ, ನಿವೃತ್ತಿ ವೇತನ ಪಾವತಿ ಶಾಖೆಗಳು ಮೋಸದ ಮತ್ತು ವಂಚನೆಯ ಪಿಪಿಓಗಳ ಮೂಲಕ ಮೋಸಗಾರರಿಗೆ ನೀಡಿರುವುದನ್ನೂ ಗಮನಿಸಿದೆ. ಅಲ್ಲದೇ, ನಿವೃತ್ತಿ ವೇತನದ ಮೊದಲ ಪಾವತಿಯ ಪ್ರಕರಣಗಳಲ್ಲಿ, ಪಿಪಿಓ ಸಂಖ್ಯೆಯನ್ನು ವಿವರ ಸೂಚಿಯಲ್ಲಿ ಉಲ್ಲೇಖಿಸದೇ ಅಥವಾ, ತಪ್ಪಾದ ಪಿಪಿಓ ಸಂಖ್ಯೆಯನ್ನು ನಮೂದಿಸಿದುದರಿಂದ, ಪಾವತಿಯ ಯುಕ್ತತೆಯನ್ನು ಪರಿಶೀಲಿಸಲು ಕಷ್ಟಸಾಧ್ಯವಾಗಿರುವುದನ್ನು ಸಹಾ ಗಮನಿಸಿದೆ. ಮುಂದುವರಿದು, ಈ ಪಾವತಿಗಳನ್ನು ರಕ್ಷಣಾ ಇಲಾಖೆಯ ನಿವೃತ್ತಿ ವೇತನದಾರರಿಗೆ ನೀಡುವ ನಿಯತ ಮಾಸಿಕ ಪಾವತಿಗಳ ಜತೆಗೆ ಪ್ರಧಾನ ನಿವೃತ್ತಿ ವೇತನ ವಿವರ ಸೂಚಿಯಲ್ಲಿ ತೋರಿಸಲಾಗಿದೆ. ನಿವೃತ್ತಿ ವೇತನ ಪಾವತಿಸುವ ಶಾಖೆಗಳು/ಸಂಪರ್ಕ ಶಾಖೆಗಳು/ತುಂಬಿ ಕೊಡುವ ಶಾಖೆಗಳು ಹೆಚ್ಚು ಪರಿಣಾಮಕಾರಿ ವ್ಯವಸ್ಥೆಯನ್ನು ಹೊಂದಲು ಕೆಳಕಂಡ ವಿಷಯಗಳನ್ನು ಪಾಲಿಸತಕ್ಕದ್ದು.

i) ನಿವೃತ್ತಿ ವೇತನ ಪಾವತಿಸುವ ಶಾಖೆಗಳು, ಸಂಪರ್ಕ ಶಾಖೆಗಳಿಗೆ ನಿವೃತ್ತಿ ವೇತನ ಪಾವತಿಯ ವಿವರ ಸೂಚಿಯನ್ನು ನಿಗದಿತ ಸಮಯದೊಳಗೆ ಸಲ್ಲಿಸಬೇಕು (ಮುಂದಿನ ತಿಂಗಳ 10ನೇ ದಿನಾಂಕದೊಳಗೆ). ವಿವರಸೂಚಿಗಳನ್ನು ಗುಂಪುಗೊಳಿಸಬಾರದು.

ii) ಸಂಪರ್ಕ ಶಾಖೆಗಳು ವಿವರ ಸೂಚಿಯ ಮೂಲ ಪ್ರತಿಯನ್ನು ವಿವರ ಪಟ್ಟಿ ಮತ್ತು ವಿವರ ದಾಖಲೆಗಳ ಸಹಿತ ವಿತರಣಾ ಬ್ಯಾಂಕುಗಳಿಗೆ (ಭಾರತೀಯ ರಿಸರ್ವ್ ಬ್ಯಾಂಕ್/ಎಸ್‌ಬಿಐ ಇತ್ಯಾದಿ ಯಾವುದು ಅನ್ವಯಿಸುವುದೋ ಅದಕ್ಕೆ) ಪ್ರತಿ ತಿಂಗಳ 11ನೇ ದಿನಾಂಕದೊಳಗೆ ಸಲ್ಲಿಸಬೇಕು.

iii) ತುಂಬಿಕೊಡುವ ಬ್ಯಾಂಕುಗಳು, ಸರ್ಕಾರಿ ಖಾತೆಗೆ ಖರ್ಚು ಹಾಕಿ, ನಿವೃತ್ತಿ ವೇತನ ಪಾವತಿ ಬ್ಯಾಂಕಿಗೆ ತುಂಬಿಕೊಟ್ಟ ನಂತರ ವಿವರ ಸೂಚಿಯ ಮೂಲಪ್ರತಿಯನ್ನು, ಸಿಡಿಎ (ನಿವೃತ್ತಿ ವೇತನ), ಅಲಹಾಬಾದಿಗೆ ನೇರವಾಗಿ ಸಲ್ಲಿಸಬೇಕು. ಮಾರ್ಚ್ ತಿಂಗಳ ವಿವರ ಸೂಚಿಯನ್ನು ಹೊರತುಪಡಿಸಿ ಇತರ ತಿಂಗಳ ವಿವರಸೂಚಿಗಳನ್ನು ಪಿಸಿಡಿಎ (ನಿವೃತ್ತಿ ವೇತನ) ಇವರಿಗೆ, ಮುಂದಿನ ತಿಂಗಳ 15ರೊಳಗೆ ತಲುಪುವಂತೆ ಕಳುಹಿಸಬೇಕು.

iv) ಮೊದಲ ನಿವೃತ್ತಿ ವೇತನದ ಪಾವತಿ ಪ್ರಕರಣಗಳಲ್ಲಿ, ನಿವೃತ್ತಿ ವೇತನ ಪಾವತಿಸುವ ಶಾಖೆಗಳು, ಎಚ್ಚರಿಕೆಯಿಂದ ಸರಿಯಾದ ಪಿಪಿಓ ಸಂಖ್ಯೆಯನ್ನು, ಗ್ರಾಚ್ಯುಯಿಟಿಯ ಮತ್ತು ಕಮ್ಯುಟೇಶನ್ ಮೊತ್ತವನ್ನು ಪ್ರತಿ ನಿವೃತ್ತಿ ವೇತನದಾರರ ಹೆಸರಿನ ಮುಂದೆ ಸೂಚಿಸಿ ವಿವರ ಸೂಚಿಯನ್ನು ಸಿದ್ಧಗೊಳಿಸಿ, ಮಾಸಿಕ ಆಧಾರದ ಮೇಲೆ ಪ್ರತ್ಯೇಕವಾಗಿ ಸಲ್ಲಿಸಬೇಕು. ನಿಯತ ಮಾಸಿಕ ಪಾವತಿ ಪ್ರಕರಣಗಳ ವಿವರಪಟ್ಟಿಯನ್ನು ಪ್ರತ್ಯೇಕವಾಗಿ ಸಿದ್ಧಪಡಿಸುವ ಕಾರ್ಯ ಮುಂದುವರಿಯುವುದಲ್ಲದೇ, ಅದನ್ನು ಪ್ರತ್ಯೇಕ ಸಾರಾಂಶದ ಜತೆಯಲ್ಲಿಯೇ ಸಲ್ಲಿಸಬೇಕು.

v) ನಿವೃತ್ತಿ ವೇತನ ಪಾವತಿಸುವ ಶಾಖೆಗಳು, ನಿಯತ ಮಾಸಿಕ ನಿವೃತ್ತಿ ವೇತನ ಪಾವತಿ ಪ್ರಕರಣಗಳ ಸಾರಾಂಶವನ್ನು, ಮೊದಲ ನಿವೃತ್ತ ವೇತನ ಪಾವತಿ ಸಾರಾಂಶವನ್ನು ಪ್ರತ್ಯೇಕವಾಗಿ ಸಿದ್ಧಪಡಿಸಬೇಕು.

9. ಸಾರ್ವಜನಿಕ ವಲಯ ಬ್ಯಾಂಕುಗಳು, ರೈಲ್ವೆ ನಿವೃತ್ತಿ ವೇತನದಾರರಿಗೆ ನಿವೃತ್ತಿ ವೇತನ ಪಾವತಿಸುವ ಯೋಜನೆ – ವಂಚನೆ ಪಾವತಿಯನ್ನು ತಪ್ಪಿಸಲು ಕ್ರಮಗಳು

(ಸಂ. ಆರ್‌ಬಿಐ/2005/334) (ಡಿಜಿಬಿಎ.ಜಿಎಡಿ.ಸಂ.ಎಚ್.3389–3421/45.02.01/2004–05 ದಿನಾಂಕ ಜನವರಿ 06, 2005)

ಕೆಲವು ಸಾರ್ವಜನಿಕ ವಲಯ ಬ್ಯಾಂಕುಗಳು, ನಕಲಿ ನಿವೃತ್ತಿ ವೇತನ ಪಾವತಿಯ ಆದೇಶಗಳನ್ನು ಸಲ್ಲಿಸಿದ (ಪಿಪಿಒಗಳು) ಅನಧಿಕೃತ ವ್ಯಕ್ತಿಗಳಿಗೆ ನಿವೃತ್ತಿ ವೇತನ / ನಿವೃತ್ತಿ ವೇತನದ ಬಾಕಿಯನ್ನು ವಿತರಿಸಿದ ಮೋಸದ ಪ್ರಕರಣಗಳನ್ನು ಅವರ ಜಾಗೃತ ಇಲ್ಲಾಖೆಯು ಪತ್ತೆ ಹಚ್ಚಿದೆಯೆಂದು ಭಾರತ ಸರ್ಕಾರದ ರೈಲ್ವೆ ಸಚಿವಾಲಯ (ರೈಲ್ವೆ ಮಂಡಳಿ) ನಮಗೆ ತಿಳಿಸಿರುತ್ತದೆ. ಆವರು ಈ ತರಹ ಮೋಸದ ಪಾವತಿ, ನಿಗದಿತ ತನಿಖೆ ಮಾಡದ ನಿವೃತ್ತಿ ವೇತನ ಪಾವತಿಸುವ ಶಾಖೆಗಳಲ್ಲಿ ಮಾಡಲಾಗಿದೆ ಎಂದೂ ತಿಳಿಸಿರುತ್ತಾರೆ. ಅಂದರೆ ಅಧಿಕೃತ ಅಧಿಕಾರಿಯ ಸಹಿಯಾಗದ ಲೆಕ್ಕಾಚಾರದ ಪಟ್ಟಿ ಇತ್ಯಾದಿಗಳ ಅಧಾರದ ಮೇಲೆ ಪಾವತಿಗಳನ್ನು ಬಿಡುಗಡೆ ಮಾಡಿರುವುದು ಹಾಗೂ ನಿವೃತ್ತಿ ವೇತನ ಪಾವತಿ ಶಾಖೆಗಳು ಪಿಪಿಒಗಳನ್ನು ಸ್ವೀಕರಿಸುವ ಸಂದರ್ಭದಲ್ಲಿ, ನಿರ್ದಿಷ್ಟವಾಗಿ ವಿಧಿಸಿರುವ ವಿಧಾನಗಳನ್ನು ಪಾಲಿಸದೇ ಇರುವುದು.

ರೈಲ್ವೆ ನಿವೃತ್ತಿ ವೇತನ ಪಾವತಿಸುವ ಶಾಖೆಗಳು, ನಕಲಿ ನಿವೃತ್ತಿ ವೇತನ ಪಾವತಿಯ ಆದೇಶಗಳ ಅಧಾರದ ಮೇಲೆ ವಂಚನೆಯ ಪಾವತಿಯನ್ನು ತಡೆಗಟ್ಟಲು, ರೈಲ್ವೆ ನಿವೃತ್ತಿ ವೇತನದಾರರಿಗೆ ನಿವೃತ್ತಿ ವೇತನ ವಿತರಿಸುವಾಗ, ರೈಲ್ವೆ ಸಚಿವಾಲಯ (ರೈಲ್ವೆ ಮಂಡಳಿ) "ಸಾರ್ವಜನಿಕ ವಲಯ ಬ್ಯಾಂಕುಗಳ ಮೂಲಕ ರೈಲ್ವೆ ನಿವೃತ್ತಿ ವೇತನ ಪಾವತಿಯ ಯೋಜನೆ"ಯಲ್ಲಿ ನಿಗದಿಪಡಿಸಿದ ವಿಧಾನಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಕೋರಲಾಗಿದೆ.

10. ಕೇಂದ್ರ ನಾಗರಿಕ ನಿವೃತ್ತಿ ವೇತನ ಪಾವತಿ – ನಿವೃತ್ತಿ ವೇತನ ಪಾವತಿಯ ಆದೇಶಗಳ (ಪಿಪಿಒಗಳು) ಎರಡೂ ಪಾಲು ಪ್ರಮಾಣಗಳಲ್ಲಿ ತುಟ್ಟಿಭತ್ಯೆ ಪರಿಹಾರ ನಮೂದಿಸುವಿಕೆ

(ಡಿಜಿಬಿಎ.ಜಿಎಡಿ.ಸಂ.ಎಚ್.3452–3485/45.01.001/2004–05 ದಿನಾಂಕ ಜನವರಿ 11, 2005)

ಸಂಬಂಧಪಟ್ಟ ನಿವೃತ್ತಿ ವೇತನ ಪಾವತಿಯ ಆದೇಶ (ಪಿಪಿಒ)ಗಳ ಎರಡೂ ಪಾಲು ಪ್ರಮಾಣಗಳಲ್ಲಿ ಮೂಲದರದಲ್ಲಿ ಬದಲಾವಣೆಯಾದ ಸಂದರ್ಭದಲ್ಲಿ, ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಮೊತ್ತವನ್ನು ಕೆಲವು ನಿವೃತ್ತಿ ವೇತನ ಪಾವತಿಸುವ ಬ್ಯಾಂಕಿನ ಶಾಖೆಗಳು ಪರಿಷ್ಕರಿಸದೇ ಇರುವುದು ನಮ್ಮ ಗಮನಕ್ಕೆ ಬಂದಿದೆ. ಈ ಬಗ್ಗೆ, "ಸಾರ್ವಜನಿಕ ವಲಯ ಬ್ಯಾಂಕುಗಳು ಕೇಂದ್ರ ಸರಕರದ ನಾಗರಿಕ ನಿವೃತ್ತಿ ವೇತನದಾರರಿಗೆ ನಿವೃತ್ತಿ ವೇತನಗಳ ಪಾವತಿಯ ಯೋಜನೆ"ಯ ಪ್ಯಾರ 12.17 ಮತ್ತು 19.1ನ್ನು ಕೆಳಗೆ ಮರುಸೂಚಿಸಲಾಗಿದೆ.

> "ನಿವೃತ್ತಿ ವೇತನದ ಮೂಲ ದರಗಳಲ್ಲಿ/ಅಥವಾ ನಿವೃತ್ತಿ ವೇತನದ ತುಟ್ಟಿಭತ್ಯೆ ಪರಿಹಾರದಲ್ಲಿ ಬದಲಾವಣೆಯಾದಲ್ಲಿ, ನಿವೃತ್ತಿ ವೇತನ ಪಾವತಿ ಶಾಖೆಯು ಪಿಪಿಒನ ನಿವೃತ್ತಿ ವೇತನದಾರನ ಅರ್ಧ ಪಾಲನ್ನು ಹಿಂಪಡೆದು, ಅದರಲ್ಲಿ ಬದಲಾವಣೆಯನ್ನು ದಾಖಲಿಸಿ, ಇತರ ವಿಷಯಗಳ ಜೊತೆಗೆ ಯಾವ ದಿನಾಂಕದಿಂದ ಬದಲಾವಣೆ ಜಾರಿಯಲ್ಲಿದೆ ಎಂಬುದನ್ನು ನಮೂದಿಸಬೇಕು.

ಈ ಕ್ರಮದ ನಂತರ, ನಿವೃತ್ತಿ ವೇತನದಾರರಿಗೆ ಪಾಲು ಪ್ರಮಾಣಗಳನ್ನು ಹಿಂತಿರುಗಿಸಬೇಕು" (ಪ್ಯಾರ 12.17).

ಸರ್ಕಾರವು ನಿವೃತ್ತಿ ವೇತನದ ಮೇಲೆ ಹೆಚ್ಚುವರಿ ಪರಿಹಾರವನ್ನು ಮಂಜೂರು ಮಾಡಿದಾಗ, ಈ ಬಗ್ಗೆ ನಾಮಕರಣಗೊಂಡಿರುವ ಸಾರ್ವಜನಿಕ ವಲಯ ಬ್ಯಾಂಕಿನ ಅಧಿಕೃತ ಪ್ರತಿನಿಧಿಗೆ, (ಅವನ ಹೆಸರಲ್ಲಿ) ಬ್ಯಾಂಕ್ ತಿಳಿಸಿದ ವಿಳಾಸಕ್ಕೆ, ಈ ಕುರಿತು ಮಾಹಿತಿಯನ್ನು ಸಿಬ್ಬಂದಿ ಸಚಿವಾಲಯ ಸಾರ್ವಜನಿಕ ಕುಂದುಕೊರತೆ ಮತ್ತು ನಿವೃತ್ತಿ ವೇತನ (ನಿವೃತ್ತಿ ವೇತನ ಮತ್ತು ನಿವೃತ್ತಿ ವೇತನದಾರರ ಕಲ್ಯಾಣ) ನೀಡುತ್ತದೆ. ಆನಂತರ, ದೆಹಲಿ ಅಥವಾ ಇತರೆಡೆ ಕಾರ್ಯನಿರ್ವಹಿಸುತ್ತ ಅವರ ಪ್ರತಿನಿಧಿಗಳ ಮೂಲಕ ಬ್ಯಾಂಕುಗಳು, ಸಿಬ್ಬಂದಿ ಸಚಿವಾಲಯ, ಸಾರ್ವಜನಿಕ ಕುಂದುಕೊರತೆ ಮತ್ತು ನಿವೃತ್ತಿ ವೇತನ (ನಿವೃತ್ತಿ ವೇತನ ಮತ್ತು ನಿವೃತ್ತಿ ವೇತನದಾರರ ಕಲ್ಯಾಣ)ದಿಂದ, ಸಂಬಂಧಿಸಿದ ಸಿದ್ಧ ಪರಿಗಣನೆ (ರೆಡಿ ರೆಕನರ್)ಯ ಜತೆಗೆ, ಮಂಜೂರಾತಿ ಆದೇಶಗಳ ಅಗತ್ಯ ಪ್ರತಿಗಳನ್ನು (ಮುಂಚಿತವಾಗಿ ತಿಳಿಸತಕ್ಕದ್ದು) ಸಂಗ್ರಹಿಸಿಕೊಂಡು ಹತ್ತು ದಿನಗಳೊಳಗೆ ಅದನ್ನು ಜಾರಿಗೊಳಿಸಲು, ಪಾವತಿಸುವ ಶಾಖೆಗಳಿಗೆ, ನೇರವಾಗಿ ರವಾನಿಸುವ ಸಲುವಾಗಿ, ಅವರ ಆಯಾಯ ಪ್ರಧಾನ ಕಚೇರಿಗಳಿಗೆ ಕೂಡಲೇ ಕಳುಹಿಸಬೇಕು. ಕೇಂದ್ರ ಸರಕರದ ನಾಗರಿಕ ನಿವೃತ್ತಿ ವೇತನದಾರರಿಗೆ ನೀಡಬೇಕಾಗಿರುವ ನಿವೃತ್ತಿ ವೇತನದ ಮೇಲಿನ ಪರಿಹಾರದ ಪರಿಷ್ಕೃತ ದರಗಳನ್ನು ಪ್ರತಿ ಪಾವತಿ ಶಾಖೆಯು ಅದರ ಪಾವತಿಯಡಿ ಕೂಡಲೇ ನಿರ್ಣಯಿಸುತ್ತದೆ. ನಿವೃತ್ತಿ ವೇತನದಾರರಿಗೆ ಅನ್ವಯಿಸುವಂತೆ ಈ ದರಗಳ ಲೆಕ್ಕಚಾರವನ್ನು ಅನುಬಂಧ XXII (ಪುಟ 41) ರ ಪ್ರಕಾರ ಮಾಡಲಾಗುವುದು ಮತ್ತು ಪರಿಹಾರವು ಜಾರಿಗೆ ಬರುವ ದಿನಾಂಕದೊಂದಿಗೆ ಪಿಪಿಓನ ವಿತರಕನ ಭಾಗದಲ್ಲಿ ಗುರುತು ಹಾಕಿಕೊಳ್ಳಲಾಗುವುದು ಹಾಗೂ ಈ ಸಂಬಂಧದಲ್ಲಿ ನಿವೃತ್ತಿ ವೇತನದಾರರಿಗೆ, ಪರಿಷ್ಕೃತ ದರದ ಪರಿಹಾರದ ಪಾವತಿ ಮತ್ತು/ಅಥವಾ ಈ ಬಗ್ಗೆ ನಿವೃತ್ತ ವೇತನದಾರರಿಗೆ ಬಾಕಿ ಪಾವತಿ ಮಾಡುವ ಮೊದಲು ಶಾಖಾ ವ್ಯವಸ್ಥಾಪಕ ಅಥವಾ ಪ್ರಭಾರಿಯ ಸಹಿಯೊಂದಿಗೆ ದೃಢೀಕರಿಸುವುದು ಆವಶ್ಯಕ _____" (ಪ್ಯಾರ 19.1).

ಮೇಲ್ಕಂಡ ನಿಬಂಧನೆಗಳ ಬಗ್ಗೆ ಬ್ಯಾಂಕುಗಳು, ತಮ್ಮ ನಿವೃತ್ತಿ ವೇತನ ಪಾವತಿಸುವ ಶಾಖೆಗಳು ಸೂಕ್ತ ಗಮನ ಹರಿಸುವಂತೆ ಕೋರಿಕೊಳ್ಳುವುದಲ್ಲದೇ, ಅವುಗಳು ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ತಿಳಿಸಬೇಕು.

11. ಏಜೆನ್ಸಿ ಬ್ಯಾಂಕುಗಳಿಂದ ರೈಲ್ವೆ ನಿವೃತ್ತಿ ವೇತನ ಬಟವಾಡೆ – ಮೀರಿದ ಪಾವತಿ ಸಾಧ್ಯತೆಯಿರುವ ಮುಖ್ಯ ಕ್ಷೇತ್ರಗಳು

(ಡಿಜಿಬಿಎ.ಜಿಎಡಿ.ಸಂ.6073/45.05.031/2004–05 ದಿನಾಂಕ ಮೇ 30, 2005)
ಮುಂಬೈ ಕೇಂದ್ರದ ರೈಲ್ವೆ ಹಣಕಾಸು ಸಲಹೆಗಾರರು ಮತ್ತು ಮುಖ್ಯ ಲೆಕ್ಕಪತ್ರ ಅಧಿಕಾರಿಯವರ ಕಚೇರಿಯಿಂದ ಪಡೆದ, ರೈಲ್ವೆ ನಿವೃತ್ತಿ ವೇತನದಾರರಿಗೆ ಬ್ಯಾಂಕುಗಳಿಂದ ಮೀರಿದ ಪಾವತಿ ಸಾಧ್ಯತೆಯಿರುವ ಪ್ರಮುಖ ಕ್ಷೇತ್ರಗಳ ಪಟ್ಟಿಯನ್ನು ಎಲ್ಲಾ ಏಜೆನ್ಸಿ ಬ್ಯಾಂಕುಗಳಿಗೆ ಕಳುಹಿಸಲಾಗಿದ್ದು, ಅದನ್ನು ಅವರ ನಿವೃತ್ತಿ ವೇತನ ಪಾವತಿಸುವ ಶಾಖೆಗಳಿಗೆ ರವಾನಿಸಲು ಕೋರಲಾಗಿದೆ ಮತ್ತು ರೈಲ್ವೆ ನಿವೃತ್ತಿ ವೇತನದ ಮೀರಿದ ಪಾವತಿ ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳಲು ಅವುಗಳಿಗೆ ಸೂಚಿಸಬೇಕೆಂದು ತಿಳಿಸಲಾಗಿದೆ.

12. ಸಾರ್ವಜನಿಕ ವಲಯ ಬ್ಯಾಂಕುಗಳ ಮೂಲಕ ರೈಲ್ವೆ ನಿವೃತ್ತಿ ವೇತನದಾರರಿಗೆ ನಿವೃತ್ತಿ ವೇತನ ಪಾವತಿ ಯೋಜನೆ – ರೈಲ್ವೆ ಸಚಿವಾಲಯದ ಏಳು ಹೊಸ ವಲಯಗಳ ಎಫ್‌ಎ ಮತ್ತು ಸಿಎಓಗಳ ನಿಯೋಜನೆ

(ಡಿಜಿಬಿಎ.ಜಿಎಡಿ.ಸಂ.ಹೆಚ್.610746/45.03.001/2005–06 ದಿನಾಂಕ ಜನವರಿ 24, 2006)

ರೈಲ್ವೆ ಸಚಿವಾಲಯವು ನಿವೃತ್ತ ವೇತನದಾರರಿಗೆ ಅಧಿಕೃತ ಬ್ಯಾಂಕುಗಳು ವಿತರಿಸಿದ ರೈಲ್ವೆ ನಿವೃತ್ತಿ ವೇತನದ ಖರ್ಚು ಒಪ್ಪಿಕೊಳ್ಳಲು / ಇತ್ಯರ್ಥ ಮಾಡಲು ಏಪ್ರಿಲ್ 1, 2006ರಿಂದ ಜಾರಿಗೆ ಬರುವಂತೆ ಏಳು ಹೊಸ ವಲಯಗಳಿಗೆ (ಅಂದರೆ ಈಶಾನ್ಯ ರೈಲ್ವೆ – ಜೈಪೂರ್, ಪೂರ್ವ ಮಧ್ಯ ರೈಲ್ವೆ – ಹಾಜಿಪುರ, ಪೂರ್ವ ಕರಾವಳಿ ರೈಲ್ವೆ – ಭುವನೇಶ್ವರ, ಉತ್ತರ ಮಧ್ಯ ರೈಲ್ವೆ – ಅಲಹಾಬದ್, ಆಗ್ನೇಯ ಮಧ್ಯ ರೈಲ್ವೆ – ಬಿಲಾಸ್‌ಪೂರ್, ನೈರುತ್ಯ ರೈಲ್ವೆ – ಹುಬ್ಬಳ್ಳಿ ಮತ್ತು ಪಶ್ಚಿಮ ಮಧ್ಯ ರೈಲ್ವೆ – ಜಬಲ್‌ಪೂರ್), ಎಫ್‌ಎ ಮತ್ತು ಸಿಎಓಗಳನ್ನು ಹೆಸರಿಸಲು ನಿರ್ಧರಿಸಿದೆ.

13. ಅಧಿಕೃತ ಬ್ಯಾಂಕುಗಳ ಮೂಲಕ ನಿವೃತ್ತಿ ವೇತನ ಪಾವತಿ – ನಿವೃತ್ತಿ ವೇತನದಾರ/ತನ್ನ ಗಂಡ/ಹೆಂಡತಿ ಜೊತೆ ನಿರ್ವಹಿಸುವ ಜಂಟಿ ಖಾತೆಗೆ ನಿವೃತ್ತಿ ವೇತನ ಜಮಾವಣೆ

(ಡಿಜಿಬಿಎ.ಜಿಎಡಿ.ಸಂ.12736/45.03.001/2005–06 ದಿನಾಂಕ ಫೆಬ್ರವರಿ 24, 2006)

ನಿವೃತ್ತಿ ವೇತನ ಪಾವತಿ ಆದೇಶ (ಪಿಪಿಒ)ದಲ್ಲಿ, ಕುಟುಂಬ ನಿವೃತ್ತಿ ವೇತನ ಪಡೆಯುವ ಅಧಿಕಾರವಿರುವ ಹೆಂಡತಿ/ಗಂಡನ ಹೆಸರಿನಲ್ಲಿರುವ ಜಂಟಿ ಖಾತೆಗೆ, ನಿವೃತ್ತಿ ವೇತನ ಜಮೆ ಮಾಡುವ ಬಗ್ಗೆ ಕೇಂದ್ರ ನಿವೃತ್ತಿ ವೇತನ ಅಕೌಂಟಿಂಗ್ ಕಚೇರಿಯು (ಸಿಪಿಎಓ) ನೀಡಿರುವ ಸೂಚನೆಗಳನ್ನು ರೈಲ್ವೆ ನಿವೃತ್ತಿ ವೇತನದಾರರಿಗೂ ರೈಲ್ವೆ ಸಚಿವಾಲಯ (ರೈಲ್ವೆ ಮಂಡಳಿ) ದಿನಾಂಕ ಅಕ್ಟೋಬರ್ 13, 2005 ರಂದು ಹೊರಡಿಸಲಾದ ಸುತ್ತೋಲೆ ಸಂಖ್ಯೆ ಆರ್‌ಬಿಎ. 63/2005(2005/ಎಸಿII/21/19) ರ ಪ್ರಕಾರ ಅನ್ವಯಿಸಿದೆ. ಈ ಮೇಲ್ಕಂಡ ದಿನಾಂಕ ಅಕ್ಟೋಬರ್ 13, 2005 ರ ರೈಲ್ವೆ ಸಚಿವಾಲಯದ ಸುತ್ತೋಲೆಯಲ್ಲಿ ಸೂಚಿಸಿರುವ ನಿಯಮಗಳು ಮತ್ತು ನಿಬಂಧನೆಗಳಿಗೆ ಒಳಗೊಂಡಂತೆ, ಹೆಂಡತಿಯೊಂದಿಗೆ ನಿವೃತ್ತಿ ವೇತನದಾರನ ಜಂಟಿ ಖಾತೆಯನ್ನು "ಮೊದಲಿನವರು ಅಥವಾ ಬದುಕುಳಿದವರು" ಅಥವಾ "ಯಾರಾದರೊಬ್ಬರು ಅಥವಾ ಬದುಕುಳಿದವರು" ಇವುಗಳಲ್ಲಿ ಯಾವುದಾದರೊಂದರ ಪ್ರಕಾರ ನಿರ್ವಹಿಸಬಹುದು.

14. ಅಧಿಕೃತ ಬ್ಯಾಂಕುಗಳ ಮೂಲಕ ನಿವೃತ್ತಿ ವೇತನದ ಪಾವತಿ – ನಿವೃತ್ತಿ ವೇತನದಾರ ತನ್ನ ಹಂಡತಿ/ಗಂಡನೊಂದಿಗೆ ನಿರ್ವಹಿಸುವ ಜಂಟಿ ಬ್ಯಾಂಕ್ ಖಾತೆಗೆ ನಿವೃತ್ತಿ ವೇತನ ಜಮಾವಣೆ

(ಡಿಜಿಬಿಎ.ಜಿಎಡಿ.ಸಂ.ಹೆಚ್–2134/45.02.001/2006–07 ದಿನಾಂಕ ಅಗಸ್ಟ್ 4, 2006)

ರಕ್ಷಣಾ ಸಚಿವಾಲಯ ಮತ್ತು ಪ್ರಿನ್ಸಿಪಾಲ್ ಕಂಟ್ರೋಲರ್ ಆಫ್ ಡಿಫೆನ್ಸ್ ಅಕೌಂಟ್ಸ್ ಇವರು ನಿವೃತ್ತಿ ವೇತನ ಪಾವತಿ ಆದೇಶದಲ್ಲಿ (ಪಿಪಿಒ) ಉಲ್ಲೇಖಿಸಿರುವಂತೆ ನಿವೃತ್ತಿ ವೇತನದಾರ ಕುಟುಂಬ ನಿವೃತ್ತಿ ವೇತನ ಪಡೆಯುವ ಅಧಿಕಾರವಿರುವ, ಆತನ ಹೆಂಡತಿ/ಅವಳ ಗಂಡನೊಂದಿಗೆ ನಿರ್ವಹಿಸುವ ಜಂಟಿ ಖಾತೆಗೆ ನಿವೃತ್ತಿ ವೇತನವು ಜಮೆಯಾಗುವಂತೆ ನಿವೃತ್ತಿ ವೇತನ ಪಾವತಿ ಮಾಡುವ ಯೋಜನೆಯನ್ನು ಮಾರ್ಪಾಡು ಮಾಡಿವೆ. ನಿವೃತ್ತಿ ವೇತನದಾರನ/ಳ ಮತ್ತು ಆತನ ಹೆಂಡತಿ/ಅವಳ ಗಂಡ ನಿರ್ವಹಿಸುವ ನಿವೃತ್ತಿ

ವೇತನದಾರನ/ಳ ಜಂಟಿ ಖಾತೆಯು, "ಮೊದಲಿನವರು ಅಥವಾ ಬದುಕುಳಿದವರು" ಅಥವಾ "ಯಾರಾದರೊಬ್ಬರು ಅಥವಾ ಬದುಕುಳಿದವರು" ಅಗಿರಬಹುದು. ಜಂಟಿ ಖಾತೆಯ ನಿರ್ವಹಣೆ ಕೆಳಕಂಡ ನಿಯಮಗಳು ಮತ್ತು ನಿಬಂಧನೆಗಳೊಳಪಟ್ಟು ಇರಬೇಕಾಗುತ್ತದೆ.

(ಎ) ನಿವೃತ್ತಿ ವೇತನದಾರನ ಬ್ಯಾಂಕ್ ಖಾತೆಗೆ, ನಿವೃತ್ತಿ ವೇತನವು ಒಮ್ಮೆ ಜಮೆಯಾದೊಡನೆ ಸರ್ಕಾರ/ಬ್ಯಾಂಕಿನ ಹೊಣೆಗಾರಿಕೆಯು ಕೊನೆಗೊಳ್ಳುತ್ತದೆ. ಹಣವನ್ನು ಆತನ ಹೆಂಡತಿ/ಅವಳ ಗಂಡ ತಪ್ಪಾಗಿ ತೆಗೆದಿದ್ದರೂ ಸಹಾ, ಮುಂದಿನ ಹೊಣೆಗಾರಿಕೆ ಉದ್ಭವವಾಗುವುದಿಲ್ಲ.

(ಬಿ) ನಿವೃತ್ತಿ ವೇತನದಾರನ ಜೀವಿತ ಕಾಲದಲ್ಲಿ ಮಾತ್ರ ನಿವೃತ್ತಿ ವೇತನ ನೀಡಲಾಗುವುದರಿಂದ, ಆತನ/ಅವಳ ಮರಣದ ವಾರ್ತೆಯನ್ನು ಬ್ಯಾಂಕಿಗೆ ತಕ್ಷಣ ತಿಳಿಸತಕ್ಕದ್ದು ಮತ್ತು ಯಾವುದೇ ಸಂದರ್ಭದಲ್ಲಿ ಮರಣ ಸಂಭವಿಸಿದ ಒಂದು ತಿಂಗಳೊಳಗೆ ತಿಳಿಸತಕ್ಕದ್ದು. ಹಾಗೆ ಮಾಡುವುದರಿಂದ, ನಿವೃತ್ತಿ ವೇತನದಾರನ ಮರಣದ ನಂತರ, ಆತನ/ಅವಳ ಗಂಡನ ಜತೆಗಿನ ಜಂಟಿ ಖಾತೆಗೆ ಮಾಸಿಕ ನಿವೃತ್ತಿ ವೇತನ ಜಮೆಮಾಡುವುದನ್ನು ಬ್ಯಾಂಕು ನಿಲ್ಲಿಸಬಹುದಾಗಿದೆ. ಆಕಸ್ಮಿಕವಾಗಿ, ಆ ರೀತಿ ತಪ್ಪಾಗಿ ಜಂಟಿ ಖಾತೆಗೆ ಹಣ ಜಮೆಯಾಗಿದ್ದಲ್ಲಿ, ಆ ಜಂಟಿ ಖಾತೆಯಿಂದ ಹಿಂಪಡೆಯಬಹುದು ಮತ್ತು / ಅಥವಾ ನಿವೃತ್ತಿ ವೇತನದಾರ ಹೊಂದಿರುವ/ಅಥವಾ ಆತನ ಹೆಂಡತಿ/ಅವಳ ಗಂಡನ ಜತೆ ಹೊಂದಿರುವ ವೈಯಕ್ತಿಕ ಅಥವಾ ಜಂಟಿಯಾಗಿರುವ ಯಾವುದೇ ಖಾತೆಯಿಂದಲೂ ಹಣವನ್ನು ಹಿಂಪಡೆಯಬಹುದು. ಕಾನೂನು ಬದ್ಧ ವಾರಸುದಾರರು, ಉತ್ತರಾಧಿಕಾರಿಗಳು, ಉಯಿಲು ನಿರ್ವಾಹಕರು ಇತ್ಯಾದಿ ಸಹಾ ಜಂಟಿ ಖಾತೆಗೆ ತಪ್ಪಾಗಿ ಜಮೆಯಾಗಿರುವ ಯಾವುದೇ ಹಣವನ್ನು ಹಿಂದಿರುಗಿಸಲು ಬಾಧ್ಯರಾಗಿರುತ್ತಾರೆ.

(ಸಿ) ನಿವೃತ್ತಿ ವೇತನ (ನಾಮಿನೇಷನ್)ದ ಬಾಕಿ ಪಾವತಿ ನಿಯಮಗಳು, 1983, ನಿವೃತ್ತಿ ವೇತನದಾರನ ಹೆಂಡತಿ/ಗಂಡನೊಂದಿಗಿನ ಜಂಟಿ ಖಾತೆಗೂ ಅನ್ವಯವಾಗುತ್ತದೆ. ಇದರಂತೆ, ನಿಯಮ 5 ಮತ್ತು 6 ರ ಪ್ರಕಾರ ಸಂಬಂಧಪಟ್ಟಂತೆ "ಸಮ್ಮತಿಸಿದ ನಾಮನಿರ್ದೇಶನ" ಇದ್ದಲ್ಲಿ, ನಿಯಮದಲ್ಲಿ ತಿಳಿಸಿರುವ ಬಾಕಿಯನ್ನು ನಾಮನಿರ್ದೇಶಿತರಿಗೆ ಪಾವತಿಸಬೇಕಾಗುತ್ತದೆ.

ಮೇಲೆ ಸೂಚಿಸಿರುವಂತೆ ಜಂಟಿ ಖಾತೆಗೆ ಅವರ ನಿವೃತ್ತಿ ವೇತನವು ಜಮೆಯಾಗಬೇಕೆಂದು ಹಾಲಿ ಇರುವ ನಿವೃತ್ತಿ ವೇತನದಾರರು ಇಚ್ಛಿಸಿದಲ್ಲಿ, ನಿರ್ದಿಷ್ಟ ನಮೂನೆಯಲ್ಲಿ ನಿವೃತ್ತಿ ವೇತನವನ್ನು ಪ್ರಸ್ತುತ ಪಡೆಯುತ್ತಿರುವ ಬ್ಯಾಂಕ್ ಶಾಖೆಗೆ ಅರ್ಜಿಯನ್ನು ಸಲ್ಲಿಸಬೇಕು. ಕಚೇರಿಯ ಜ್ಞಾಪನಾ ಪತ್ರದಲ್ಲಿ ತಿಳಿಸಿರುವ ನಿಯಮ ಮತ್ತು ನಿಬಂಧನೆಗಳಿಗೆ ತಮ್ಮ ಸಮ್ಮತಿ ಸೂಚಕವಾಗಿ ನಿವೃತ್ತಿ ವೇತನದಾರನ ಹೆಂಡತಿ/ಗಂಡ ಇದಕ್ಕೆ ಸಹಿ ಹಾಕಬೇಕಾಗುತ್ತದೆ. ಈ ಸೂಚನೆಗಳು, ಈ ಕಚೇರಿಯ ವಿವರಣಾ ಪತ್ರ ಪ್ರಕಟಿಸಿದ ನಂತರ ನಿವೃತ್ತರಾಗುವ ಸರ್ಕಾರಿ ನೌಕರರಿಗೂ ಸಹಾ ಅನ್ವಯವಾಗುತ್ತವೆ.

15. ಸಾರ್ವಜನಿಕ ವಲಯ ಬ್ಯಾಂಕುಗಳಿಂದ ಪಶ್ಚಿಮ ಬಂಗಾಳ (ಭಾಗ–ಎ) ಸರ್ಕಾರದ ನಿವೃತ್ತಿ ವೇತನದಾರರಿಗೆ ನಿವೃತ್ತಿ ವೇತನ ಪಾವತಿಯ ಯೋಜನೆ – ನಿವೃತ್ತಿ ವೇತನದಾರ ತನ್ನ ಹೆಂಡತಿ/ಗಂಡನೊಂದಿಗೆ ನಿರ್ವಹಿಸುವ ಜಂಟಿ ಬ್ಯಾಂಕ್ ಖಾತೆಗೆ ನಿವೃತ್ತಿ ವೇತನ ಜಮಾವಣೆ

(ಡಿಜಿಬಿಎ.ಜಿಎಡಿ.6926/45.05.005/2006–07 ದಿನಾಂಕ ಅಕ್ಟೋಬರ್ 30, 2006)

ನಿವೃತ್ತಿ ವೇತನದಾರರು ನಿವೃತ್ತಿ ವೇತನ ಪಾವತಿಯ ಆದೇಶದಲ್ಲಿ (ಪಿಪಿಒ) ಕುಟುಂಬ ನಿವೃತ್ತಿ ವೇತನಕ್ಕಾಗಿ ಅಧಿಕಾರ ಪಡೆದಿರುವ, ತಮ್ಮ ಹೆಂಡತಿ/ಗಂಡನೊಂದಿಗೆ ನಿರ್ವಹಿಸುವ ಜಂಟಿ ಖಾತೆಗೆ ನಿವೃತ್ತಿ ವೇತನ ಪಾವತಿ ಜಮೆಮಾಡುವ ಯೋಜನೆಯನ್ನು ಪಶ್ಚಿಮ ಬಂಗಾಳ ಸರ್ಕಾರವು ಮಾರ್ಪಾಡು ಮಾಡಿದೆ. ನಿವೃತ್ತಿ ವೇತನದಾರನು ತನ್ನ ಹೆಂಡತಿ/ಗಂಡನೊಂದಿಗೆ ನಿರ್ವಹಿಸುವ ಜಂಟಿ ಖಾತೆ "ಮೊದಲಿನವರು ಅಥವಾ

ಬದುಕುಳಿದವರು" ಅಥವಾ "ಯಾರಾದರೊಬ್ಬರು ಅಥವಾ ಬದುಕುಳಿದವರು" ಇವುಗಳಲ್ಲಿ ಯಾವುದೇ ಆಗಿರಬಹುದು. ಖಾತೆಯ ನಿರ್ವಹಣೆ ಈ ಕೆಳಕಂಡ ನಿಯಮ ಮತ್ತು ನಿಬಂಧನೆಗೊಳಪಟ್ಟು ಇರಬೇಕಾಗುತ್ತದೆ.

(ಎ) ನಿವೃತ್ತಿ ವೇತನದಾರನ ಬ್ಯಾಂಕು ಖಾತೆಗೆ, ನಿವೃತ್ತಿ ವೇತನವು ಒಮ್ಮೆ ಜಮೆಯಾದರೆ, ಸರ್ಕಾರ/ಬ್ಯಾಂಕಿನ ಹೊಣೆಗಾರಿಕೆಯು ಕೊನೆಗೊಳ್ಳುತ್ತದೆ. ಹಣವನ್ನು ಆತನ ಹೆಂಡತಿ/ಅವಳ ಗಂಡ ತಪ್ಪಾಗಿ ತೆಗೆದಿದ್ದರೂ ಸಹಾ, ಮುಂದಿನ ಹೊಣೆಗಾರಿಕೆ ಉದ್ಭವವಾಗುವುದಿಲ್ಲ.

(ಬಿ) ನಿವೃತ್ತಿ ವೇತನದಾರನ ಜೀವಿತ ಕಾಲದಲ್ಲಿ ಮಾತ್ರ ಆತನಿಗೆ ನಿವೃತ್ತಿ ವೇತನವನ್ನು ನೀಡಲಾಗುವುದರಿಂದ, ಆತನು/ಅವಳು ಮರಣ ಹೊಂದಿದಾಗ, ಮರಣದ ವಾರ್ತೆಯನ್ನು ತಕ್ಷಣ ಬ್ಯಾಂಕಿಗೆ ತಿಳಿಸತಕ್ಕದ್ದು ಮತ್ತು ಯಾವುದೇ ಸಂದರ್ಭದಲ್ಲಿ ಮರಣ ಸಂಭವಿಸಿದ ಒಂದು ತಿಂಗಳೊಳಗೆ ತಿಳಿಸತಕ್ಕದ್ದು. ಹೀಗೆ ಮಾಡುವುದರಿಂದ, ನಿವೃತ್ತಿ ವೇತನದಾರನ ಮರಣದ ನಂತರ, ಆತನ ಹೆಂಡತಿ/ಅವಳ ಗಂಡನ ಜೊತೆಗಿನ ಜಂಟಿ ಖಾತೆಗೆ ಮಾಸಿಕ ನಿವೃತ್ತಿ ವೇತನ ಜಮೆ ಮಾಡುವುದನ್ನು ಬ್ಯಾಂಕು ನಿಲ್ಲಿಸಬಹುದಾಗಿದೆ. ಆಕಸ್ಮಿಕವಾಗಿ, ಆ ರೀತಿ ತಪ್ಪಾಗಿ ಜಂಟಿ ಖಾತೆಗೆ ಹಣ ಜಮಾವಣೆಯಗಿದ್ದಲ್ಲಿ, ಆ ಜಂಟಿ ಖಾತೆಯಿಂದ ಹಣವನ್ನು ಹಿಂಪಡೆಯಬಹುದು ಮತ್ತು/ಅಥವಾ ನಿವೃತ್ತಿ ವೇತನದಾರ ಹೊಂದಿದ್ದ/ಅಥವಾ ಆತನ ಹೆಂಡತಿ/ಅವಳ ಗಂಡ ಹೊಂದಿರುವ ವೈಯಕ್ತಿಕ ಅಥವಾ ಜಂಟಿಯಾಗಿರುವ ಯಾವುದೇ ಖಾತೆಯಿಂದಲೂ ಹಣವನ್ನು ಹಿಂಪಡೆಯಬಹುದು. ಕಾನೂನುಬದ್ಧ ವಾರಸುದಾರರು, ಉತ್ತರಾಧಿಕಾರಿಗಳು, ಉಯಿಲು ನಿರ್ವಾಹಕರು ಇತ್ಯಾದಿ ಸಹಾ, ಜಂಟಿ ಖಾತೆಗೆ ತಪ್ಪಾಗಿ ಜಮೆಯಾಗಿರುವ ಹಣವನ್ನು ಹಿಂತಿರುಗಿಸಲು ಬಾಧ್ಯರಾಗಿರುತ್ತಾರೆ.

(ಸಿ) ನಿವೃತ್ತಿ ವೇತನ(ನಾಮಿನೇಷನ್)ದ ಬಾಕಿ ಪಾವತಿಯ ನಿಯಮಗಳು, 1983, ನಿವೃತ್ತಿ ವೇತನದಾರನ ಹೆಂಡತಿ/ಗಂಡನೊಂದಿಗಿನ ಜಂಟಿ ಖಾತೆಗೂ ಅನ್ವಯವಾಗುತ್ತದೆ. ಇದರಂತೆ ನಿಯಮ 5 ಮತ್ತು 6 ರ ಪ್ರಕಾರ "ಸಮ್ಮತಿಸಿದ ನಾಮನಿರ್ದೇಶನ" ಇದ್ದಲ್ಲಿ, ನಿಯಮಾವಳಿಯಲ್ಲಿ ತಿಳಿಸಿರುವ ಬಾಕಿಯನ್ನು ನಾಮನಿರ್ದೇಶಿತರಿಗೆ ಪಾವತಿಸಬೇಕಾಗುತ್ತದೆ.

ಮೇಲೆ ಸೂಚಿಸಿರುವಂತೆ ಜಂಟಿ ಖಾತೆಗೆ ಅವರ ನಿವೃತ್ತಿ ವೇತನವು ಜಮೆ ಮಾಡಬೇಕೆಂದು ಹಾಲಿ ಇರುವ ನಿವೃತ್ತಿ ವೇತನದಾರರು ಇಚ್ಛಿಸಿದಲ್ಲಿ, ನಿರ್ಧಿಷ್ಟ ನಮೂನೆಯಲ್ಲಿ ನಿವೃತ್ತಿ ವೇತನವನ್ನು ಪ್ರಸ್ತುತ ಪಡೆಯುತ್ತಿರುವ ಬ್ಯಾಂಕಿನ ಶಾಖೆಗೆ ಅರ್ಜಿಯನ್ನು ಸಲ್ಲಿಸಬೇಕು. ಕಚೇರಿಯ ಜ್ಞಾಪನಾ ಪತ್ರ (ಮೆಮೋರೆಂಡಮ್)ದಲ್ಲಿ ತಿಳಿಸಿರುವ ನಿಯಮ ಮತ್ತು ನಿಬಂಧನೆಗಳಿಗೆ ತಮ್ಮ ಸಮ್ಮತಿ ಸೂಚಕವಾಗಿ ನಿವೃತ್ತಿ ವೇತನದಾರನ ಹೆಂಡತಿ/ಗಂಡ ಇದಕ್ಕೆ ಸಹಿ ಹಾಕಬೇಕಾಗುತ್ತದೆ. ಈ ಸೂಚನೆಗಳು, ಈ ಕಚೇರಿಯ ವಿವರಣಾ ಪತ್ರ ಪ್ರಕಟಿಸಿದ ನಂತರ ನಿವೃತ್ತರಾಗುವ ಸರ್ಕಾರಿ ನೌಕರರಿಗೂ ಸಹಾ ಅನ್ವಯವಗುತ್ತದೆ.

16. ಸಾರ್ವಜನಿಕ ವಲಯ ಬ್ಯಾಂಕುಗಳು ಪಂಜಾಬ್ ಸರ್ಕಾರದ ನಿವೃತ್ತಿ ವೇತನದಾರರಿಗೆ ನಿವೃತ್ತಿ ವೇತನ ನೀಡುವ ಯೋಜನೆ

(ಡಿಜಿಬಿಎ.ಜಿಎಡಿ.ಹೆಚ್–8973/45.05.003/2006–07 ದಿನಾಂಕ ನವೆಂಬರ್ 24, 2006)

ನಿವೃತ್ತಿ ವೇತನದಾರರು ನಿವೃತ್ತಿ ವೇತನದ ಪಾವತಿಯ ಆದೇಶದಲ್ಲಿ (ಪಿಪಿಒ), ಕುಟುಂಬ ನಿವೃತ್ತಿ ವೇತನಕ್ಕಾಗಿ ಅಧಿಕರ ಪಡೆದಿರುವ, ತಮ್ಮ ಹೆಂಡತಿ/ಗಂಡನೊಂದಿಗೆ ನಿರ್ವಹಿಸುವ ಜಂಟಿ ಖಾತೆಗೆ ನಿವೃತ್ತಿ ವೇತನದ ಪಾವತಿಯ ಜಮೆ ಮಾಡುವ ಯೋಜನೆಯನ್ನು ಪಂಜಾಬ್ ಸರ್ಕಾರವು ಮಾರ್ಪಾಡು ಮಾಡಿದೆ. ನಿವೃತ್ತಿ ವೇತನದಾರರು ತಮ್ಮ ಹೆಂಡತಿ/ಗಂಡನೊಂದಿಗೆ ನಿರ್ವಹಿಸುವ ಜಂಟಿ ಖಾತೆ "ಮೊದಲಿನವರು ಅಥವಾ

ಬದುಕುಳಿದವರು" ಅಥವಾ "ಯಾರೊಬ್ಬರು ಅಥವಾ ಬದುಕುಳಿದವರು" ಇವುಗಳಲ್ಲಿ ಯಾವುದೇ ಆಗಿರಬಹುದು. ಖಾತೆಯ ನಿರ್ವಹಣೆ ಕೆಳಕಂಡ ನಿಯಮ ಮತ್ತು ನಿಬಂಧನೆಗೊಳಪಟ್ಟು ಇರಬೇಕಾಗುತ್ತದೆ.

(ಎ) ನಿವೃತ್ತಿ ವೇತನದಾರನ ಬ್ಯಾಂಕು ಖಾತೆಗೆ, ನಿವೃತ್ತಿ ವೇತನವು, ಒಮ್ಮೆ ಜಮೆಯಾದರೆ, ಸರ್ಕಾರ/ಬ್ಯಾಂಕಿನ ಹೊಣೆಗಾರಿಕೆಯು ಕೊನೆಗೊಳ್ಳುತ್ತದೆ. ಹಣವನ್ನು ಆತನ ಹೆಂಡತಿ/ಅವಳ ಗಂಡ ತಪ್ಪಾಗಿ ತೆಗೆದಿದ್ದರೂ ಸಹಾ ಮುಂದಿನ ಯಾವ ಹೊಣೆಯೂ ಉದ್ಭವವಾಗುದಿಲ್ಲ.

(ಬಿ) ನಿವೃತ್ತಿ ವೇತನದಾರನ ಜೀವಿತಾವಧಿಯಲ್ಲಿ ಮಾತ್ರ ಆತನಿಗೆ ನಿವೃತ್ತಿ ವೇತನವನ್ನು ನೀಡಲಾಗುವುದರಿಂದ, ಆತನು/ಅವಳು ಮರಣ ಹೊಂದಿದಾಗ, ಮರಣದ ವಾರ್ತೆಯನ್ನು ತಕ್ಷಣ ಬ್ಯಾಂಕಿಗೆ ತಿಳಿಸತಕ್ಕದ್ದು ಮತ್ತು ಯಾವುದೇ ಸಂದರ್ಭದಲ್ಲಿ ಮರಣ ಸಂಭವಿಸಿದ ಒಂದು ತಿಂಗಳೊಳಗೆ ತಿಳಿಸತಕ್ಕದ್ದು. ಹೀಗೆ ಮಾಡುವುದರಿಂದ, ನಿವೃತ್ತಿ ವೇತನದಾರನ ಮರಣದ ನಂತರ, ಆತನ ಹೆಂಡತಿ/ಅವಳ ಗಂಡನ ಜೊತೆಗಿನ ಜಂಟಿ ಖಾತೆಗೆ ಮಾಸಿಕ ನಿವೃತ್ತಿ ವೇತನ ಜಮೆ ಮಾಡುವುದನ್ನು ಬ್ಯಾಂಕು ನಿಲ್ಲಿಸಬಹುದಾಗಿದೆ. ಆದಾಗ್ಯೂ, ಆ ರೀತಿ ಪ್ರಮಾದದಿಂದ ಜಂಟಿ ಖಾತೆಗೆ ಹಣ ಜಮೆಯಾಗಿದ್ದಲ್ಲಿ, ಆ ಜಂಟಿ ಖಾತೆಯಿಂದ ಹಣವನ್ನು ಹಿಂಪಡೆಯಬಹುದು ಮತ್ತು/ಅಥವಾ ನಿವೃತ್ತಿ ವೇತನದಾರ ಹೊಂದಿರುವ/ಅಥವಾ ಆತನ ಹೆಂಡತಿ/ಅವಳ ಗಂಡ ಹೊಂದಿರುವ ವೈಯಕ್ತಿಕ ಅಥವಾ ಜಂಟಿಯಾಗಿರುವ ಯಾವುದೇ ಖಾತೆಯಿಂದ ಬೇಕಾದರೂ ಹಣವನ್ನು ಹಿಂಪಡೆಯಬಹುದು. ಕಾನೂನುಬದ್ಧ ವಾರಸುದಾರರು, ಉತ್ತರಾಧಿಕಾರಿಗಳು, ಉಯಿಲು ನಿರ್ವಾಹಕರು ಇತ್ಯಾದಿ ಸಹಾ, ಜಂಟಿ ಖಾತೆಗೆ ತಪ್ಪಾಗಿ ಜಮೆಯಾಗಿರುವ ಹಣವನ್ನು ಹಿಂತಿರುಗಿಸಲು ಬಾಧ್ಯರಾಗಿರುತ್ತಾರೆ.

(ಇ) ಪಂಜಾಬ್ ಹಣಕಾಸು ನಿಯಮಗಳು, ಸಂಪುಟ 1ರ ನಿಯಮ 5.3 ಬಿ ಅಡಿ ನಿವೃತ್ತಿ ವೇತನ ನಿಬಂಧನೆ 4 ಮತ್ತು ಈ ವಿಷಯದ ಮೇಲೆ ಅಗಾಗ ಹೊರಡಿಸಲಾದ ಸೂಚನೆಗಳು ನಿವೃತ್ತ ವೇತನದಾರ ಹೆಂಡತಿ/ಗಂಡನೊಂದಿಗೆ ನಿರ್ವಹಿಸುತ್ತಿರುವ ಜಂಟಿ ಖಾತೆಗೆ ಸಹಾ ಅನ್ವಯವಾಗುತ್ತದೆ. ಈ ನಿಯಮಾವಳಿಗಳ ಅನುಗುಣವಾಗಿ "ಸಮ್ಮತಿಸಿದ ನಾಮನಿರ್ದೇಶನ"ವಿದ್ದಲ್ಲಿ, ನಾಮನಿರ್ದೇಶಿತನಿಗೆ ಬಾಕಿಯನ್ನು ಪಾವತಿಸಬೇಕಾಗುತ್ತದೆ. ಪರಿಷ್ಕೃತ ನಾಮನಿರ್ದೇಶನ ಅರ್ಜಿ ನಮೂನೆಗಳನ್ನು ದಿನಾಂಕ ನವೆಂಬರ್ 20, 1984ರಂದು ಪಂಜಾಬ್ ಹಣಕಾಸು ಇಲಾಖೆಯ ಸುತ್ತೋಲೆ ಪತ್ರ ಸಂ. 21(1)83–ಈಖ(6)11991 ರ ಪ್ರಕಾರ ತಿದ್ದುಪಡಿಮಾಡಲಾಗಿದೆ.

ಮೇಲೆ ಸೂಚಿಸಿರುವಂತೆ ಜಂಟಿ ಖಾತೆಗೆ ತಮ್ಮ ನಿವೃತ್ತಿ ವೇತನವನ್ನು ಜಮೆ ಮಾಡಬೇಕೆಂದು ಹಾಲಿ ಇರುವ ನಿವೃತ್ತಿ ವೇತನದಾರರು ಇಚ್ಛಿಸಿದಲ್ಲಿ, ನಿರ್ದಿಷ್ಟ ನಮೂನೆಯಲ್ಲಿ, ಪ್ರಸ್ತುತ ನಿವೃತ್ತಿ ವೇತನ ಪಡೆಯುತ್ತಿರುವ ಬ್ಯಾಂಕ್ ಶಾಖೆಗೆ ಅರ್ಜಿಯನ್ನು ಸಲ್ಲಿಸಬೇಕು. ಪತ್ರದಲ್ಲಿ ಸೂಚಿಸಿರುವ ನಿಯಮಗಳು ಮತ್ತು ಷರತ್ತುಗಳಿಗೆ ಸಮ್ಮತಿ ಸೂಚಕವಾಗಿ ನಿವೃತ್ತಿ ವೇತನದಾರನ ಹೆಂಡತಿ/ಗಂಡ ಇದಕ್ಕೆ ಸಹಿ ಹಾಕಬೇಕಾಗುತ್ತದೆ. ಈ ಸೂಚನೆಗಳು ಈ ಪತ್ರ ಪ್ರಕಟಿಸಿದ ನಂತರ ನಿವೃತ್ತರಾಗುವ ಸರ್ಕಾರಿ ನೌಕರರಿಗೂ ಅನ್ವಯವಾಗುತ್ತದೆ.

17. ರಕ್ಷಣಾ ಇಲಾಖೆಯ ನಿವೃತ್ತಿ ವೇತನ ಪಾವತಿಯನ್ನು ತುಂಬಿಕೊಡುವ ಬಗ್ಗೆ ಏಕಗವಾಕ್ಷಿ ಪದ್ಧತಿಯ ಪರಿಚಯಿಸುವಿಕೆ

(ಡಿಜಿಬಿಎ.ಜಿಎಡಿ.ಸಂ.ಎಚ್–13834/45.02.001/2006–07 ದಿನಾಂಕ ಮಾರ್ಚ್ 13, 2007)

ರಕ್ಷಣಾ ಇಲಾಖೆಯ ಅಕೌಂಟ್ಸ್ ಇಲಾಖೆಯ ಪ್ರಿನ್ಸಿಪಾಲ್ ಕಂಟ್ರೋಲರ್ ಅವರ ಕಚೇರಿಯೊಂದಿಗಿನ ಸಮಾಲೋಚನೆಯೊಂದಿಗೆ ದಿನಾಂಕ ಏಪ್ರಿಲ್ 1, 2007ರಿಂದ ಜಾರಿಬರುವಂತೆ ರಕ್ಷಣಾ ಇಲಾಖೆಯ ನಿವೃತ್ತಿ

ವೇತನವನ್ನು ತುಂಬಿಕೊಡಲು ಏಕಗವಾಕ್ಷಿ ಪದ್ಧತಿಯನ್ನು ಪರಿಚಯಿಸಲು ನಿರ್ಧರಿಸಲಾಯಿತು. ಇದರಂತೆ ಏಪ್ರಿಲ್ 1, 2007ರಿಂದ ಬ್ಯಾಂಕುಗಳು ಮಾಡಿದ ರಕ್ಷಣಾ ಇಲಾಖೆಯ ನಿವೃತ್ತಿ ವೇತನ ಪಾವತಿ ತುಂಬಿಕೊಡುವ ಕಾರ್ಯವನ್ನು ಆರ್‌ಬಿಐ(ಪಿಎಡಿಗಳು), ಎಸ್‌ಬಿಐ ಮತ್ತು ಅದರ ಸಹವರ್ತಿ ಬ್ಯಾಂಕುಗಳು ನಿಲ್ಲಿಸಿವೆ. ನಿವೃತ್ತಿ ವೇತನ ಪಾವತಿಗಳ ವಹಿವಾಟುಗಳನ್ನು ನಾಗಪುರನಲ್ಲಿರುವ ಸಂಪರ್ಕ ಘಟಕದ ಮೂಲಕ ಕೇಂದ್ರೀಯ ನಾಗರಿಕ ನಿವೃತ್ತಿ ವೇತನದಂತೆ ನಿಧಿಯ ಇತ್ಯರ್ಥಕ್ಕಾಗಿ, ನಾಗಪುರದಲ್ಲಿರುವ ರಿಸರ್ವ್ ಬ್ಯಾಂಕ್ ಕೇಂದ್ರಿಯ ಲೆಕ್ಕ ಪತ್ರ ವಿಭಾಗಕ್ಕೆ (ಸಿಎಎಸ್) ವರದಿಮಾಡತಕ್ಕದ್ದು. ಪಾವತಿ ವಿವರ ಸೂಚಿಯನ್ನು, ಏಜೆನ್ಸಿ ಬ್ಯಾಂಕುಗಳು ನೇರವಾಗಿ, ಶ್ರೀ ಬಿ.ಡಿ. ತಿವಾರಿ, ಎಸ್‌ಎಓ(ಪಿ), ಪಿಸಿಡಿಯವರ (ಪಿ) ಕಚೇರಿ, ದ್ರೌಪದಿ ಘಾಟ್, ಅಲಹಾಬಾದ್ ಇವರಿಗೆ ಕಳುಹಿಸಬೇಕು.
ನಿವೃತ್ತಿ ವೇತನ ಪಾವತಿ ವಿವರ ಸೂಚಿಗಳು ಲಭ್ಯ ವಾಗದ ಕಾರಣ ಏಪ್ರಿಲ್ 1, 2007ರ ಹಿಂದಿನ ಬಾಕಿಯಿರುವ ಎಲ್ಲಾ ವಹಿವಾಟುಗಳನ್ನು ಆರ್‌ಬಿಐ/ಎಸ್‌ಬಿಐ ಮತ್ತು ಅದರ ಸಹವರ್ತಿಗಳ ತುಂಬಿಕೊಡುವ ಶಾಖೆಗಳ ಮೂಲಕ ಪರಿಹರಿಸಿಕೊಳ್ಳಬಹುದು.

18. ಸಾರ್ವಜನಿಕ ವಲಯ ಬ್ಯಾಂಕುಗಳ ಮೂಲಕ ಅರುಣಾಚಲ ಪ್ರದೇಶ ಸರ್ಕಾರದ ನಿವೃತ್ತಿ ವೇತನದಾರರಿಗೆ ನಿವೃತ್ತಿ ವೇತನ ಪಾವತಿಸುವ ಯೋಜನೆ

(ಡಿಜಿಬಿಎ.ಜಿಎಡಿ.ಎಚ್–14279/45.05.024/2006–07 ದಿನಾಂಕ ಮಾರ್ಚ್ 23, 2007)

ನಿವೃತ್ತಿ ವೇತನದಾರರು ನಿವೃತ್ತಿ ವೇತನ ಪಾವತಿಯ ಆದೇಶದಲ್ಲಿ (ಪಿಪಿಓ) ಕುಟುಂಬ ನಿವೃತ್ತಿ ವೇತನಕ್ಕಾಗಿ ಅಧಿಕಾರ ಪಡೆದಿರುವ, ತಮ್ಮ ಹೆಂಡತಿ/ಗಂಡನೊಂದಿಗೆ ಜಂಟಿಯಾಗಿ ನಿರ್ವಹಿಸುವ ಜಂಟಿ ಖಾತೆಗೆ ನಿವೃತ್ತಿ ವೇತನ ಪಾವತಿ ಜಮೆ ಮಾಡಲು ಅನುಮತಿ ನೀಡುವ ಯೋಜನೆಯನ್ನು ಅರುಣಾಚಲ ಪ್ರದೇಶ ಸರ್ಕಾರವು ಮಾರ್ಪಾಡು ಮಾಡಿದೆ. ನಿವೃತ್ತಿ ವೇತನದಾರನು ತನ್ನ ಹೆಂಡತಿ/ಗಂಡನೊಂದಿಗೆ ನಿರ್ವಹಿಸುವ ಜಂಟಿಖಾತೆ "ಮೊದಲಿನವರು ಅಥವಾ ಬದುಕುಳಿದವರು" ಅಥವಾ "ಯಾರಾದರೊಬ್ಬರು ಅಥವಾ ಬದುಕುಳಿದವರು" ಇವುಗಳಲ್ಲಿ ಯಾವುದೇ ಆಗಿರಬಹುದು. ಖಾತೆಯ ನಿರ್ವಹಣೆ ಈ ಕೆಳಕಂಡ ನಿಯಮ ಮತ್ತು ಷರತ್ತುಗಳಿಗೊಳಟ್ಟು ಇರಬೇಕಾಗುತ್ತದೆ.
(ಎ) ನಿವೃತ್ತಿ ವೇತನದಾರನ ಬ್ಯಾಂಕು ಖಾತೆಗೆ, ನಿವೃತ್ತಿ ವೇತನವು ಒಮ್ಮೆ ಜಮೆಯಾದಲ್ಲಿ ಸರ್ಕಾರ/ಬ್ಯಾಂಕಿನ ಬಾಧ್ಯತೆಯು ಸಮಾಪ್ತಿಯಾಗುತ್ತದೆ. ಹಣವನ್ನು ಆತನ ಹೆಂಡತಿ/ಆಕೆಯ ಗಂಡ ಅವರ ಅರಿವಿಗೆ ಬಾರದೆ ತಪ್ಪಾಗಿ ಪಡೆದಿದ್ದರೂ, ಮುಂದೆ ಯಾವ ಬಾಧ್ಯತೆಯು ಉದ್ಭವಿಸುವುದಿಲ್ಲ.

(ಬಿ) ನಿವೃತ್ತಿ ವೇತನದಾರನ ಜೀವಿತಾವಧಿಯಲ್ಲಿ ಮಾತ್ರ ಆತನಿಗೆ ನಿವೃತ್ತಿ ವೇತನವನ್ನು ನೀಡಲಾಗುವುದರಿಂದ, ಆತನು/ಅವಳು, ಮರಣ ಹೊಂದಿದಲ್ಲಿ, ಮರಣದ ವಾರ್ತೆಯನ್ನು ಬ್ಯಾಂಕಿಗೆ ತಕ್ಷಣ ತಿಳಿಸತಕ್ಕದ್ದು, ಹಾಗೂ ಯಾವುದೇ ಸಂದರ್ಭದಲ್ಲಿ ಮರಣ ಸಂಭವಿಸಿದ ಒಂದು ತಿಂಗಳೊಳಗೆ ತಿಳಿಸತಕ್ಕದ್ದು. ಅದರಿಂದ, ನಿವೃತ್ತಿ ವೇತನದಾರನ ಮರಣದ ನಂತರ, ಆತನ ಹೆಂಡತಿ/ಅವಳ ಗಂಡನ ಜತೆಯಲ್ಲಿರುವ ನಿವೃತ್ತಿವೇತನದಾರನ ಜಂಟಿ ಖಾತೆಗೆ ಮಾಸಿಕ ನಿವೃತ್ತಿ ವೇತನ ಜಮೆ ಮಾಡುವುದನ್ನು ಬ್ಯಾಂಕು ನಿಲ್ಲಿಸಬಹುದು. ಆದಾಗ್ಯೂ, ಯಾವುದೇ ಪ್ರಮಾದದಿಂದ ಜಂಟಿ ಖಾತೆಗೆ ಹಣ ಜಮೆಯಾಗಿದ್ದಲ್ಲಿ, ಹಣವನ್ನು ನಿವೃತ್ತಿ ವೇತನದಾರ/ಳು ಹೊಂದಿರುವ ಜಂಟಿ ಖಾತೆಯಿಂದಲೂ ಅಥವಾ ಆತನ ಹೆಂಡತಿ/ಅವಳ ಗಂಡ ಹೊಂದಿರುವ ವೈಯುಕ್ತಿಕ ಅಥವಾ ಜಂಟಿಖಾತೆಯಿಂದಲೂ ಹಿಂಪಡೆಯಬಹುದು. ಕಾನೂನುಬದ್ಧ

ವಾರಸುದಾರರು, ಉತ್ತರಾಧಿಕಾರಿಗಳು, ಉಯಿಲು ನಿರ್ವಹಕರು, ಇತ್ಯಾದಿ ಸಹಾ, ಜಂಟಿ ಖಾತೆಗೆ ತಪ್ಪಾಗಿ ಜಮೆಯಾಗಿರುವ ಹಣವನ್ನು ಹಿಂದಿರುಗಿಸಲು ಬಾಧ್ಯರಾಗಿರುತ್ತಾರೆ.

(ಸಿ) ಮೇಲೆ ಸೂಚಿಸಿರುವಂತೆ ಜಂಟಿ ಖಾತೆಗೆ ತಮ್ಮ ನಿವೃತ್ತಿ ವೇತನವನ್ನು ಜಮೆ ಮಾಡಬೇಕೆಂದು ಹಾಲಿ ಇರುವ ನಿವೃತ್ತಿ ವೇತನದಾರರು ಇಚ್ಛಿಸಿದಲ್ಲಿ, ನಿರ್ದಿಷ್ಟ ನಮೂನೆಯಲ್ಲಿ, ನಿವೃತ್ತಿ ವೇತನ ಪಾವತಿಗಾಗಿ, ಪ್ರಸ್ತುತ ಎಲ್ಲಿ ನಿವೃತ್ತಿ ವೇತನ ಪಡೆಯುತ್ತಿರುವವರೋ ಅ ಬ್ಯಾಂಕಿಗೆ ಅರ್ಜಿಯನ್ನು ಸಲ್ಲಿಸಬೇಕು. ನಿವೃತ್ತಿ ವೇತನದಾರ/ಳ ಹೆಂಡತಿ/ಗಂಡ, ನಿಯಮ ಮತ್ತು ಷರತ್ತುಗಳಿಗೆ ತಮ್ಮ ಸಮ್ಮತಿ ಇದೆಯೆಂದು ಸೂಚಿಸುವುದಕ್ಕಾಗಿ ಆ ಅರ್ಜಿಗೆ ಸಹಿ ಹಾಕಬೇಕು. ಈ ಪ್ರಕಟಣೆಯು ಪ್ರಕಟವಾದ ನಂತರ ನಿವೃತ್ತಿಯಾಗುವ ಸರ್ಕಾರಿ ನೌಕರರಿಗೂ ಈ ಸೂಚನೆಗಳು ಅನ್ವಯವಾಗುತ್ತದೆ.

(ಡಿ) ಪಿಪಿಒದಲ್ಲಿ ಕುಟುಂಬ ನಿವೃತ್ತಿ ವೇತನ ಪಡೆಯುವುದಕ್ಕಾಗಿ ಅಧಿಕೃತವಾದ ಗಂಡ / ಹೆಂಡತಿಯನ್ನುಳಿದು ಇನ್ನ್ಯಾವುದೇ ವ್ಯಕ್ತಿಯ ಜೊತೆ ತೆರೆದ ಜಂಟಿ ಖಾತೆಗೆ ನಿವೃತ್ತಿ ವೇತನ ಜಮಾ ಮಾಡಲು ಒಪ್ಪಿಗೆ ಇರುವುದಿಲ್ಲ. ಕುಟುಂಬ ನಿವೃತ್ತಿ ವೇತನದಾರರು, ಈ ಪರಿಷ್ಕೃತ ಯೋಜನೆಗೆ ಒಳಪಡುವುದಿಲ್ಲ.

19. ಸಾರ್ವಜನಿಕ ವಲಯ ಬ್ಯಾಂಕುಗಳ ಮೂಲಕ ಕೇಂದ್ರ ಸರ್ಕಾರದ ನಿವೃತ್ತಿವೇತನ ಹಂಚಿಕೆ – ನಿವೃತ್ತಿವೇತನ ಚೀಟಿಯ ನೀಡಿಕೆ

(ಡಿಜಿಬಿಎ.ಜಿಎಡಿ.ಎಚ್–10975/45.05.031/2006–2007 ದಿನಾಂಕ ಜನವರಿ 9. 2007)

ನಿವೃತ್ತಿವೇತನದ ಆರಂಭದಲ್ಲಿ ಮತ್ತು ನಂತರ, ನಿವೃತ್ತಿವೇತನದ ಪ್ರಮಾಣದಲ್ಲಿ ಬದಲಾವಣೆ ಇದ್ದಲ್ಲಿ, ಭಾರತ ಸರ್ಕಾರ ಹಣಕಾಸು ಸಚಿವಾಲಯದ ಸೆಂಟ್ರಲ್ ಪೆನ್ಷನ್ ಅಕೌಂಟಿಂಗ್ ಕಚೇರಿಯೊಂದಿಗೆ ಸಮಾಲೋಚನೆಯೊಂದಿಗೆ, ಕೇಂದ್ರ ಸರಕಾರಿ ಸಮಿತಿ ವೇತನದಾರರಿಗೆ (ನಾಗರಿಕ) ನಿವೃತ್ತಿವೇತನದ ಚೀಟಿಯನ್ನು ನೀಡಲು ನಿರ್ಧರಿಸಲಾಯಿತು. ಎಲ್ಲ ಏಜೆನ್ಸಿ ಬ್ಯಾಂಕುಗಳು ನಿವೃತ್ತಿವೇತನ ಪಾವತಿಸುವ ತಮ್ಮ ಶಾಖೆಗಳಿಗೆ ಸೂಕ್ತವಾದ ಸೂಚನೆಗಳನ್ನು ನೀಡಲು ಸೂಚಿಸಲಾಯಿತು.

20. ಸಾರ್ವಜನಿಕ ವಲಯ ಬ್ಯಾಂಕುಗಳ ಮೂಲಕ ಕೇಂದ್ರ ಸರ್ಕಾರದ ನಿವೃತ್ತಿವೇತನ ಹಂಚಿಕೆ – ರಕ್ಷಣಾ ಇಲಾಖೆಯ ನಿವೃತ್ತಿವೇತನದಾರರಿಗೆ ನಿವೃತ್ತಿವೇತನ ಚೀಟಿಯನ್ನು ನೀಡುವುದು.

(ಡಿಜಿಬಿಎ.ಜಿಎಡಿ.ಎಚ್–17663/45.05.031/2006–2007 ದಿನಾಂಕ ಜೂನ್ 12, 2007)

ಚೀಫ಼್ ಕಂಟ್ರೋಲರ್ ಆಫ಼್ ಡಿಫೆನ್ಸ್ ಅಕೌಂಟ್ಸ್ ಕಚೇರಿ ಮತ್ತು ರಕ್ಷಣಾ ಸಚಿವಾಲಯದ, ಮಾಜಿ ಯೋಧರ ಕಲ್ಯಾಣ ಇಲಾಖೆಯ ಜತೆಗೆ ಸಮಾಲೋಚಿಸಿದ ನಂತರ ಕೇಂದ್ರ ಸರ್ಕಾರದ ನಿವೃತ್ತಿವೇತನದಾರರಿಗೆ(ನಾಗರಿಕ) ಹಾಲಿ ವ್ಯವಸ್ಥೆಗೆ ಸಮನಾಗಿ, ಶಸ್ತ್ರಾಸ್ತ್ರ ಪಡೆಯ ಸಿಬ್ಬಂದಿ / ಕುಟುಂಬ ನಿವೃತ್ತಿವೇತನದಾರರೂ ಸೇರಿದಂತೆ ರಕ್ಷಣಾ ನಾಗರಿಕ ನಿವೃತ್ತಿವೇತನದಾರರಿಗೆ ನಿವೃತ್ತಿವೇತನದ ಚೀಟಿಯನ್ನು ನೀಡಲು ನಿರ್ಧರಿಸಲಾಯಿತು. ಎಲ್ಲಾ ಏಜೆನ್ಸಿ ಬ್ಯಾಂಕುಗಳು ನಿವೃತ್ತಿವೇತನ ಪಾವತಿಸುವ ತಮ್ಮ ಎಲ್ಲ ಶಾಖೆಗಳಿಗೆ ಸೂಚನೆ ನೀಡಬೇಕೆಂದು ಸೂಚಿಸಲಾಯಿತು.

ಪ್ರಧಾನ ಸುತ್ತೋಲೆಯಲ್ಲಿ ಕ್ರೋಢಿಕರಿಸಿದ ಸುತ್ತೋಲೆಗಳ ಪಟ್ಟಿ

ಕ್ರಮ ಸಂಖ್ಯೆ	ಸುತ್ತೋಲೆ ಸಂಖ್ಯೆ	ದಿನಾಂಕ	ವಿಷಯ
1.	ಡಿಜಿಬಿಎ.ಜಿಎಡಿ.ಸಂ ಎಚ್–416/45.01.003/2002–03	21.03.2003	ರಾಜ್ಯ ಸರ್ಕಾರದ ನಿವೃತ್ತಿವೇತನದಾರರ ತುಟ್ಟಿಭತ್ಯ ಪರಿಹಾರ, ಇತರ, ಕುರಿತು ಇರುವ ಸರ್ಕಾರಿ ಆಜ್ಞೆಗಳನ್ನು ರಾಜ್ಯ ಸರ್ಕಾರಗಳ ವೆಬ್ ತಾಣದಲ್ಲಿ ಪ್ರಕಟಿಸುವುದು.
2	ಡಿಜಿಬಿಎ.ಜಿಎಡಿ.ಸಂ ಎಚ್–506/45.01.001/2002–03	12.04.2003	ಸಾರ್ವಜನಿಕ ವಲಯ ಬ್ಯಾಂಕುಗಳ ಮೂಲಕ ಸರ್ಕಾರಿ ನಿವೃತ್ತಿವೇತನದಾರರಿಗೆ ನಿವೃತ್ತಿವೇತನ ಪಾವತಿ–ನಿವೃತ್ತಿವೇತನದಾರರಿಗೆ ತುಟ್ಟಿಭತ್ಯೆ ಪರಿಹಾರ (ಡಿಆರ್) ದ ಪಾವತಿಯ ವಿಳಂಬವನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳು–ಭಾರತೀಯ ರಿಸರ್ವ್ ಬ್ಯಾಂಕ್ ಮೂಲಕ ಡಿಆರ್ ಇತ್ಯಾದಿಗಳ ಕುರಿತ ಸರ್ಕಾರಿ ಆಜ್ಞೆಗಳನ್ನು ರವಾನಿಸುವುದನ್ನು ಸ್ಥಗಿತಗೊಳಿಸುವಿಕೆ.
3	ಡಿಜಿಬಿಎ.ಜಿಎಡಿ.ಸಂ ಎಚ್–770/45.01.003/2003–04	25.02.2004	ನಿವೃತ್ತಿವೇತನದ ಸುತ್ತೋಲೆಗಳನ್ನು ಆರ್‌ಬಿಐ ವೆಬ್‌ತಾಣದಲ್ಲಿ ಪ್ರಕಟಿಸುವುದು.
4.	ಡಿಜಿಬಿಎ.ಜಿಎಡಿ.ಸಂ ಎಚ್–11303/45.01.003/2005–006	06.02.2006	ಸಾರ್ವಜನಿಕ ವಲಯ ಬ್ಯಾಂಕುಗಳ ಮೂಲಕ ನಿವೃತ್ತಿವೇತನ ಪಾವತಿ–ತುಟ್ಟಿಭತ್ಯೆ ಪರಿಹಾರ ಪಾವತಿ(ಡಿಆರ್)
5.	ಡಿಜಿಬಿಎ.ಜಿಎಡಿ.ಸಂ ಎಚ್–94/45.05.031/2004–05	24.08.2004	ನಮೂನೆ 'ಎ' ಮತ್ತು 'ಬಿ' ಯಲ್ಲಿ ನಾಮನಿರ್ದೇಶನದ ಸ್ವೀಕಾರ–ಕೇಂದ್ರೀಯ ನಾಗರಿಕ ನಿವೃತ್ತಿವೇತನ
6.	ಡಿಜಿಬಿಎ.ಜಿಎಡಿ.ಸಂ ಎಚ್–3611/45.03.002/2005–06	10.10.2005	ರೈಲ್ವೆ ನಿವೃತ್ತಿವೇತನದಾರರಿಗೆ ನಿವೃತ್ತಿವೇತನ ಬಾಕಿ ಪಾವತಿಯ

			ಬಗ್ಗೆ(ನಮೂನೆ 'ಎ' ಮತ್ತು 'ಬಿ' ಯಲ್ಲಿ) ನಾಮನಿರ್ದೇಶನದ ಸ್ವೀಕಾರ
7.	ಡಿಜಿಬಿಎ.ಜಿಎಡಿ.ಸಂ ಹೆಚ್–612–644/45.01.001/2004–05	07.10.2004	ಕೇಂದ್ರೀಯ ಪ್ರತಿನಿಯೋಜನೆಯಲ್ಲಿದ್ದಾಗ ಕೇಂದ್ರ ಸರಕಾರದಿಂದ ನಿವೃತ್ತಿ ಹೊಂದುವ ಅಖಿಲ ಭಾರತ ಸೇವ ಅಧಿಕಾರಿಗಳಿಗೆ ನಿವೃತ್ತಿವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳನ್ನು ನೀಡುವ ಬಗ್ಗೆ ಪ್ರಕ್ರಿಯೆಗಳ ಜಾರಿಗೊಳಿಸುವಿಕೆ.
8.	ಡಿಜಿಬಿಎ.ಜಿಎಡಿ.ಸಂ–867–899/45.02.001/2004–05	18.10.2004	ರಕ್ಷಣಾ ಇಲಾಖೆಯ ನಿವೃತ್ತಿವೇತನದಾರರಿಗೆ ನಿವೃತ್ತಿವೇತನವನ್ನು ಸಾರ್ವಜನಿಕ ವಲಯ ಬ್ಯಾಂಕುಗಳ ಮೂಲಕ ಪಾವತಿಸುವ ಯೋಜನೆ – ನಿವೃತ್ತಿ ವೇತನ ಪಾವತಿ ವಿವರ ಪಟ್ಟಿಗಳ ವಿಳಂಬ ಸಲ್ಲಿಕೆ ಹಾಗು ಮೋಸ ಮತ್ತು ವಂಚನಾ ಪಾವತಿಗಳನ್ನು ತಡೆಯುವ ಕ್ರಮಗಳು.
9.	ಡಿಜಿಬಿಎ.ಜಿಎಡಿ.ಸಂ ಎಚ್–3389–3421/45.02.01/2004–05	06.01.2005	ರೈಲ್ವೆ ಇಲಾಖೆಯ ನಿವೃತ್ತಿವೇತನದಾರರಿಗೆ ಸಾರ್ವಜನಿಕ ವಲಯ ಬ್ಯಾಂಕುಗಳ ಮೂಲಕ ನಿವೃತ್ತಿವೇತನ ಪಾವತಿ ಯೋಜನೆ–ವಂಚನೆ ಪಾವತಿ ತಡೆಗಟ್ಟುವಿಕೆ ಕ್ರಮ.
10.	ಡಿಜಿಬಿಎ.ಜಿಎಡಿ.ಸಂ ಹೆಚ್–3452–3485/45.01.001/2004–05	11.01.2005	ಕೇಂದ್ರೀಯ ನಾಗರಿಕ ನಿವೃತ್ತಿ ವೇತನ ಪಾವತಿ–ನಿವೃತ್ತಿ ವೇತನ ಪಾವತಿ ಆದೇಶದ ಎರಡೂ ಭಾಗಗಳಲ್ಲಿ ತುಟ್ಟಿಭತ್ಯೆ ನಿವೃತ್ತಿ ವೇತನದ ಗುರುತು ಹಾಕಿಕೊಳ್ಳುವಿಕೆ.
11.	ಡಿಜಿಬಿಎ.ಜಿಎಡಿ.ಸಂ –6073/45.05.031/2004–05	30.05.2005	ಏಜೆನ್ಸಿ ಬ್ಯಾಂಕುಗಳಿಂದ ರೈಲ್ವೆ ನಿವೃತ್ತಿ ವೇತನ ವಿತರಣೆ.
12.	ಡಿಜಿಬಿಎ.ಜಿಎಡಿ.ಸಂ ಎಚ್–10746/45.03.001/2005–06	24.01.2006	ಸಾರ್ವಜನಿಕ ವಲಯ ಬ್ಯಾಂಕುಗಳ ಮೂಲಕ ರೈಲ್ವೆ ಇಲಾಖೆ

			ನಿವೃತ್ತಿವೇತನದಾರರಿಗೆ ನಿವೃತ್ತಿವೇತನ ಪಾವತಿ ಯೋಜನೆ– ರೈಲ್ವೆ ಸಚಿವಾಲಯದಿಂದ ಏಳು ಹೊಸ ವಲಯಗಳಿಗೆ ಎಫ್.ಎ ಮತ್ತು ಸಿಎಓ ಗಳ ನಿಯೋಜನೆ.
13.	ಡಿಜಿಬಿಎ.ಜಿಎಡಿ.ಸಂ – 12736/45.03.001/2005–06	24.02.2006	ಅಧಿಕೃತ ಬ್ಯಾಂಕುಗಳ ಮೂಲಕ ನಿವೃತ್ತಿವೇತನ ಪಾವತಿ– ನಿವೃತ್ತಿವೇತನದಾರ ತನ್ನ ಹೆಂಡತಿ/ಗಂಡನೊಂದಿಗೆ ನಿರ್ವಹಿಸುವ ಜಂಟಿ ಖಾತೆಗೆ ನಿವೃತ್ತಿವೇತನ ಜಮೆ.
14.	ಡಿಜಿಬಿಎ.ಜಿಎಡಿ.ಸಂ ಎಚ್– 2134/45.02.001/2006–07	04.08.2006	ಅಧಿಕೃತ ಬ್ಯಾಂಕುಗಳ ಮೂಲಕ ನಿವೃತ್ತಿವೇತನ ಪಾವತಿ– ನಿವೃತ್ತಿವೇತನದಾರ ತನ್ನ ಹೆಂಡತಿ/ಗಂಡನೊಂದಿಗೆ ನಿರ್ವಹಿಸುವ ಜಂಟಿ ಬ್ಯಾಂಕು ಖಾತೆಗೆ ನಿವೃತ್ತಿವೇತನ ಜಮೆ.
15.	ಡಿಜಿಬಿಎ.ಜಿಎಡಿ.ಸಂ – 6926/45.05.005/2006–07	30.10.2006	ಸಾರ್ವಜನಿಕ ವಲಯ ಬ್ಯಾಂಕುಗಳಿಂದ ಪಶ್ಚಿಮ ಬಂಗಾಳ ('ಎ' ಭಾಗ) ಸರ್ಕಾರದ ನಿವೃತ್ತಿವೇತನದಾರರಿಗೆ ನಿವೃತ್ತಿವೇತನ ಪಾವತಿ ಯೋಜನೆ– ನಿವೃತ್ತಿವೇತನದಾರ ತನ್ನ ಹೆಂಡತಿ/ಗಂಡನೊಂದಿಗೆ ನಿರ್ವಹಿಸುವ ಜಂಟಿ ಬ್ಯಾಂಕು ಖಾತೆಗೆ ನಿವೃತ್ತಿವೇತನ ಜಮೆ.
16.	ಡಿಜಿಬಿಎ.ಜಿಎಡಿ.ಸಂ ಎಚ್– 8973/45.05.003/2006–07	24.11.2006	ಸಾರ್ವಜನಿಕ ವಲಯ ಬ್ಯಾಂಕುಗಳಿಂದ ಪಂಜಾಬ್ ಸರ್ಕಾರದ ನಿವೃತ್ತಿವೇತನದಾರರಿಗೆ ನಿವೃತ್ತಿವೇತನ ಪಾವತಿ ಯೋಜನೆ.
17.	ಡಿಜಿಬಿಎ.ಜಿಎಡಿ.ಸಂ ಎಚ್– 13834/45.02.001/2006–07	13.03.2007	ರಕ್ಷಣಾ ಇಲಾಖೆ ನಿವೃತ್ತಿವೇತನ ಪಾವತಿಗಳನ್ನು ತುಂಬಿಕೊಡಲು ಏಕಗವಾಕ್ಷಿ ವ್ಯವಸ್ಥೆಯ ಪರಿಚಯಿಸುವಿಕೆ.
18.	ಡಿಜಿಬಿಎ.ಜಿಎಡಿ.ಸಂ ಎಚ್– 14279/45.05.024/2006–07	23.03.2007	ಸಾರ್ವಜನಿಕ ವಲಯ ಬ್ಯಾಂಕುಗಳಿಂದ ಅರುಣಾಚಲ ಪ್ರದೇಶ ಸರ್ಕಾರದ

			ನಿವೃತ್ತಿವೇತನದಾರರಿಗೆ ನಿವೃತ್ತಿವೇತನ ಪಾವತಿ ಯೋಜನೆ.
19.	ಡಿಜಿಬಿಎ.ಜಿಎಡಿ.ಸಂ ಎಚ್–10975/45.05.031/2006–07	09.01.2007	ಸಾರ್ವಜನಿಕ ವಲಯ ಬ್ಯಾಂಕುಗಳ ಮೂಲಕ ಕೇಂದ್ರ ಸರ್ಕಾರದ ನಿವೃತ್ತಿವೇತನ ವಿತರಣೆ–ನಿವೃತ್ತಿವೇತನದ ಚೀಟಿ ನೀಡಿಕೆ.
20.	ಡಿಜಿಬಿಎ.ಜಿಎಡಿ.ಸಂ ಹೆಚ್–17663/45.05.031/2006–07	12.06.2007	ಸಾರ್ವಜನಿಕ ವಲಯ ಬ್ಯಾಂಕುಗಳ ಮೂಲಕ ಕೇಂದ್ರ ಸರ್ಕಾರದ ನಿವೃತ್ತಿವೇತನ ವಿತರಣೆ–ರಕ್ಷಣಾ ಇಲಾಖೆ ನಿವೃತ್ತಿವೇತನದಾರರಿಗೆ ನಿವೃತ್ತಿವೇತನದ ಚೀಟಿ ನೀಡಿಕೆ.